ಸಂಪುಟ: 01 ಸಂಚಿಕೆ: 84 ಪುಟ: 04 ಬೆಲೆ: 02 ಮಂಗಳವಾರ ಸೆಪ್ಟೆಂಬರ್ 08 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 84 Pages:04 Price:02 TUESDAY SEPTEMBER 08 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ಅರ್ಹತೆ ಇಲ್ಲದವರಿಗೆ ಅನಗತ್ಯವಾಗಿ ಪ್ರೀತಿ ಮತ್ತು ಸಮಯ ಕೊಟ್ಟಾಗ ನಮ್ಮ ಮೌಲ್ಯ ಕುಸಿತಗೊಳ್ಳುವುದು.

ವಾಣಿ ಭಂಡಾರಿ.

## ಶ್ರಾವಣ ಮಾಸದ ಸುಗಮ ಸಂಗೀತ ಕಾರ್ಯಕ್ರಮ ಯಶಸ್ವಿ,

ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಪ್ಪಳ ಹಾಗೂ ಶ್ರೀ ಕಾಶಿ ವಿಶ್ವನಾಥ ಕರಡಿ ಮಜಲು ಜಾನಪದ ಕಲಾತಂಡ ಕಿನ್ನಾಳ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಸಂಗಮ್ಮ ಎಸ್ ಸೋಮಾ ಕಿನ್ನಾಳ ಸುಗಮ ಸಂಗೀತ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.




ಕಾರ್ಯಕ್ರಮದ ’ಲ್ಲಿಹಾರ್ಮೋನಿಂ ಮಂನಲ್ಲಿ ಲಚ್ಚಣ್ಣ ಕಿನ್ನಾಳ ತಬಲಾದಲ್ಲಿ ಶಿವಲಿಂಗಪ್ಪ ಕಿನ್ನಾಳ ತಾಳದಲ್ಲಿ ವಿನಾಯಕ ಎಚ್ ಕಿನ್ನಾಳ ಗೆಜ್ಜೆ ವಾದನದಲ್ಲಿ ಚಿದಾನಂದಪ್ಪ ಕಿನ್ನಾಳ ಗೀತಮ್ಮ ಎಚ್ ಕಿನ್ನಾಳ ಪ್ರೇಕ್ಷಕರ ಗಮನ ಸೆಳೆದು ಯಶಸ್ವಿಯಾಗಿ ಗೊಂಡಿತು. ಈ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಗ್ರಾಮದ ಬಹಳಷ್ಟು ಜನ ಪಾಲ್ಗೊಂಡಿದ್ದರು.

# ಕರ್ಮಭೂಮಿಗೆ ದ್ರೋಹ ಬಗೆಯಲು ಹಿಂದುತ್ವ ಎಂದಿಗೂ ಹೇಳುವುದಿಲ್ಲ: ಮೋಹನ್ ಭಾಗವತ್

ಲಂಡನ್, ಸೆ.7– ವಿದೇಶಗಳಲ್ಲಿ ನೆಲೆಸಿರುವ ಹಿಂದೂ ಸಮುದಾಯವು ತಾವು ವಾಸಿಸುವ ದೇಶದ ಕಾನೂನು, ಸಂಸ್ಕೃತಿ ಹಾಗೂ ಕರ್ತವ್ಯಗಳಿಗೆ ಬದ್ಧರಾಗಿ ಬದುಕಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಕರೆ ನೀಡಿದ್ದಾರೆ. ಆರ್‌ಎಸ್‌ಎಸ್ ಶತಮಾನೋತ್ಸವದ ಅಂಗವಾಗಿ ಯುನೈಟೆಡ್ ಕಿಂಗ್‌ಡಮ್‌ಗೆ ಭೇಟಿ ನೀಡಿರುವ ಅವರು, ಲಂಡನ್‌ನಲ್ಲಿ ನಡೆದ ನಾಗರಿಕ ಸಂವಾದ ಹಾಗೂ ಸಮುದಾಯ ನಾಯಕರ ಸಭೆಯಲ್ಲಿ ಮಾತನಾಡಿದರು.

ಭಾರತ ಮತ್ತು ಬ್ರಿಟನ್ ನಡುವಿನ ಹಿತಾಸಕ್ತಿಗಳು ವಿಭಿನ್ನವಾಗಿರಬಹುದಾದರೂ, ಬ್ರಿಟಿಷ್ ಹಿಂದೂಗಳು ತಮ್ಮ ಕರ್ಮಭೂಮಿಗೆ ಸಂಪೂರ್ಣ ಪ್ರಾಮಾಣಿಕರಾಗಿರಬೇಕು ಎಂದು ಭಾಗವತ್ ಹೇಳಿದರು. ಜನ್ಮಭೂಮಿಯಿಂದ ಸಾಂಸ್ಕೃತಿಕ ಮೌಲ್ಯಗಳನ್ನು ಪಡೆದವರು, ಆ ಮೌಲ್ಯಗಳನ್ನು ತಾವು ವಾಸಿಸುವ ದೇಶದಲ್ಲಿ ಸತ್ಕಾರ್ಯಗಳ ಮೂಲಕ ಕಾರ್ಯರೂಪಕ್ಕೆ ತರಬೇಕು. ಬ್ರಿಟಿಷ್ ಹಿಂದೂಗಳು ಅಲ್ಲಿನ ಸಮಾಜದೊಂದಿಗೆ ಬೆರೆತು, ದೇಶದ ಕಾನೂನು ಹಾಗೂ ವ್ಯವಸ್ಥೆಗಳಿಗೆ ಅನುಗುಣವಾಗಿ ಪ್ರಾಮಾಣಿಕ ಜೀವನ ನಡೆಸಿದರೆ ಯಾವುದೇ ದ್ವಂದ್ವ ಅಥವಾ ಸಂಘರ್ಷಕ್ಕೆ ಅವಕಾಶ



ಇರುವುದಿಲ್ಲ ಎಂದು ಅವರು ಪ್ರತಿಪಾದಿಸಿದರು.

ಲಂಡನ್‌ನಲ್ಲಿ ಶತಮಾನೋತ್ಸವ ಕಾರ್ಯಕ್ರಮ ಆರ್‌ಎಸ್‌ಎಸ್ ತನ್ನ ಸ್ಥಾಪನೆಯ ಶತಮಾನೋತ್ಸವದ ಅಂಗವಾಗಿ ಜಾಗತಿಕ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇದರ ಭಾಗವಾಗಿ ಮೋಹನ್ ಭಾಗವತ್ ಅವರು ನ್ಯೂಯಾರ್ಕ್, ಟೊರೊಂಟೊ ಬಳಿಕ ಸೆಪ್ಟೆಂಬರ್ 2ರಂದು ಲಂಡನ್‌ಗೆ ಆಗಮಿಸಿದ್ದರು. ಸೆಪ್ಟೆಂಬರ್ 6ರಂದು ಲಂಡನ್‌ನಲ್ಲಿ ನಡೆದ ಏಕತೆಯ ಆಚರಣೆ ಕಾರ್ಯಕ್ರಮದಲ್ಲಿ ಯುಕೆ–ದ್ಯಂತದ 310ಕ್ಕೂ ಹೆಚ್ಚು ಸಮುದಾಯ ಸಂಸ್ಥೆಗಳು ಹಾಗೂ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಆಗಸ್ಟ್ 29ರಂದು ನ್ಯೂಯಾರ್ಕ್‌ನಲ್ಲಿ ನಡೆದ ಬಹುಧರ್ಮೀಯ ನಾಯಕರ ಸಭೆಯಲ್ಲೂ ಮೋಹನ್ ಭಾಗವತ್ ಅವರು ಸೌಹಾರ್ದತೆ ಹಾಗೂ ಜಾಗತಿ–ಕ ಶಾಂತಿಯ ಸಂದೇಶ ನೀಡಿದ್ದರು.

> “ ಹಿಂದೂ ಸ್ವಯಂಸೇವಕ ಸಂಘ ಯುಕೆ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆರ್‌ಎಸ್‌ಎಸ್ ಶತಮಾನೋತ್ಸವದ ಹಿನ್ನೆಲೆಯಲ್ಲಿ ‘ವಸುಧೈವ ಕುಟುಂಬಕಂ’ ಎಂಬ ಭಾರತೀಯ ಪರಿಕಲ್ಪನೆಯನ್ನು ಜಾಗತಿಕ ಮಟ್ಟದಲ್ಲಿ ಸಾರುವ ಪ್ರಯತ್ನ ನಡೆಸುತ್ತಿದೆ. ಇದರ ಭಾಗವಾಗಿ ಸಾಮಾಜಿಕ ಸಾಮರಸ್ಯ, ಕುಟುಂಬ ಮೌಲ್ಯಗಳ ಬಲವರ್ಧನೆ, ಪರಿಸರ ಜವಾಬ್ದಾರಿ, ಸ್ವಾವಲಂಬನೆ ಹಾಗೂ ನಾಗರಿಕ ಜವಾಬ್ದಾರಿ ಎಂಬ ಐದು ಪ್ರಮುಖ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ. ಈ ಹಿಂದೆ ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರು ಯುಕೆ, ಅಮೆ–ರಿಕ ಹಾಗೂ ಜರ್ಮನಿಗೆ ಭೇಟಿ ನೀಡಿ ಜಾಗತಿಕ ಸಂವಾದಕ್ಕೆ ಬುನಾದಿ ಹಾಕಿದ್ದರು.

ಲಂಡನ್‌ನಲ್ಲಿ ನಡೆದ ಕಾರ್ಯಕ್ರಮವು ಭಾರತ ಮತ್ತು ಬ್ರಿಟನ್ ನಡುವಿನ ಸಾಂಸ್ಕೃತಿ–ಕ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದೊಂದಿಗೆ ನಡೆದಿದ್ದು, ವಿದೇಶಗಳಲ್ಲಿರುವ ಭಾರತೀಯ ಸಮುದಾಯದ ಸಾಮಾಜಿಕ ಹೊಣೆಗಾರಿಕೆ ಕುರಿತ ಚರ್ಚೆಗೂ ವೇದಿಕೆಯಾಯಿತು.

## ಗಂಗಾವತಿಯಲ್ಲಿ ರೆಡ್ಡಿ–ತಂಗಡಗಿ ನಡುವೆ ಏಕವಚನ ವಾಕ್ಸಮರ!




ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ನಡುವೆ ಏಕವಚನದ ವಾಗ್ದಾಳಿ ತಾರಕಕ್ಕೇರಿದ್ದು, ಕೊಪ್ಪಳ–ಬಳ್ಳಾರಿ ಭಾಗದಲ್ಲಿ ರಾಜ–ಕೀಯ ಸಂಚಲನ ಮೂಡಿಸಿದೆ.**

ಬಿಜೆಪಿಯ ‘ಬಳ್ಳಾರಿ ಚಲೋ’ ಪಾದಯಾತ್ರೆಯ ಸಭೆಯಲ್ಲಿ ಮಾತನಾಡಿದ ಜನಾರ್ದನ ರೆಡ್ಡಿ, “ಲೇ ತಮ್ಮಾ ತಂಗಡಗಿ, ಮೊದಲ ಬಾರಿ ಸಚಿವನಾಗಿದ್ದು ಹೇಗೆ ನೆನಪಿದೆಯಾ? ನಿನ್ನನ್ನು ಹೆಲಿಕಾಪ್ಟರ್‌ನಲ್ಲಿ ಕರೆದುಕೊಂಡು ಹೋಗಿ, ಹಣದ ಚೀಲ ಕೊಟ್ಟು ಸಚಿವನನ್ನಾಗಿ ಮಾಡಿದ್ದು ನಾನು” ಎಂದು ಏಕವಚನದಲ್ಲಿ ಹರಿಹಾಯ್ದಿದ್ದರು. ಇದಕ್ಕೆ ತಿರುಗೇಟು ನೀಡಿದ ಸಚಿವ ತಂಗಡಗಿ, “ಲೇ ಜನಾರ್ದನ ರೆಡ್ಡಿ, ಜೈಲಿನಲ್ಲಿ ಮುದ್ದೆ ಮು–ರಿದವನೇ, ನನ್ನ ಹೆಸರಲ್ಲಿ ಯಡಿಯೂರಪ್ಪನವರನ್ನು ಬ್ಲ್ಯಾಕ್‌ಮೇಲ್ ಮಾಡಿದ ಎಡಬಿಡಂಗಿ ನೀನು, ನೀನು ಗಣಿ ಲೂಟಿ ಮಾಡಿದ ಕಳ್ಳ. ತಾಕತ್ತಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಉಪಚುನಾವಣೆಗೆ ಬಾ” ಎಂದು ಸವಾಲು ಹಾಕಿದ್ದಾರೆ.

ಭೋವಿ ಸಮುದಾಯದ ಆಕ್ರೋಶ: ಸಚಿವ ತಂಗಡಗಿ ಅವರು ಭೋವಿ ಸಮುದಾಯದ ಪ್ರಮುಖ ನಾಯಕರಾಗಿದ್ದು, ಸಚಿವರೊಬ್ಬರನ್ನು “ಲೇ ತಂಗಡಗಿ” ಎಂದು ನಿಂದಿಸಿರುವುದು ಇಡೀ ಸಮುದಾಯಕ್ಕೆ ಮಾಡಿದ ಅವಮಾನ ಎಂದು ಭೋವಿ ಸಮಾಜದ ಮುಖಂಡರಾದ ದೊಡ್ಡ ಹನುಮೇಶ್, ಸಣ್ಣ ಹನುಮೇಶ್ ಭೋವಿ ಸಿದ್ದಾಪುರ ಸೇರಿದಂತೆ ಅನೇಕ ಮುಖಂಡರು ಖಂಡನಾ ಸಭೆ, ಧರಣಿ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜನಾರ್ದನ ರೆಡ್ಡಿ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ವಾಕ್ಸಮರದಿಂದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಉಭಯ ನಾಯಕರ ಬೆಂಬಲಿಗರ ನಡುವೆ ಮಾತಿನ ಚಕಮಕಿ ಮುಂದುವರಿದಿದೆ.

## ಶಂಭುಲಿಂಗನಗೌಡ ಪಾಟೀಲ್ ಗೆ ಬಿಜೆಪಿ ಸೇರ್ಪಡೆಗೆ ಬಸವರಾಜ ಹೊರಟ್ಟಿ ಆಹ್ವಾನ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ ಅವರ ನಿವಾಸಕ್ಕೆ ರವಿವಾರದಂದು ವಿಧಾನ ಪರಿಷತ್ತಿನ ನಿಕಟಪೂರ್ವ ಸಭಾಪತಿ ಹಾಗೂ ಹಿರಿಯ ನಾಯಕ ಬಸವರಾಜ ಹೊರಟ್ಟಿ ಅವರು ಭೇಟಿ ನೀಡಿದರು.**

ಈ ಸಂದರ್ಭದಲ್ಲಿ ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ ಅವರೊಂದಿಗೆ ವಿವಿಧ ರಾಜಕೀಯ ಹಾಗೂ ಶಿಕ್ಷಕರ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರಗಳ ಕುರಿತು



ಚರ್ಚೆ ನಡೆಸಿದ ಬಸವರಾಜ ಹೊರಟ್ಟಿ ಅವರು, ಭಾರತೀಯ ಜನತಾ ಪಕ್ಷದ ತತ್ವ, ಸಿದ್ಧಾಂತ ಹಾಗೂ ಸಂಘಟನಾ ಕಾರ್ಯಗಳ ಕುರಿತು ಮಾಹಿತಿ ನೀಡಿದರು. ಅಲ್ಲದೆ, ಪಕ್ಷದೊಂದಿಗೆ ಕೈಜೋಡಿಸಿ ಬಿಜೆಪಿಗೆ ಸೇರ್ಪಡೆಯಾಗುವಂತೆ ಶಂಭುಲಿಂಗನಗೌಡ ಪಾಟೀಲ್ ಅವರಿಗೆ ಆಹ್ವಾನ ನೀಡಿದರು.

ಶಿಕ್ಷಕರ ಸಮುದಾಯದಲ್ಲಿ ಉತ್ತಮ ಸಂಪರ್ಕ ಹೊಂದಿರುವ ಶಂಭುಲಿಂಗನಗೌಡ ಪಾಟೀಲ್ ಅವರು ಪಕ್ಷಕ್ಕೆ ಸೇರ್ಪಡೆಯಾದರೆ ಸಂಘಟನೆಗೆ ಮತ್ತಷ್ಟು ಬಲ ಬರಲಿದೆ ಎಂಬ ಅಭಿಪ್ರಾಯವನ್ನು ಹೊರಟ್ಟಿ ಅವರು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಬಿಜೆಪಿ ಮುಖಂಡರು, ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಶಂಭುಲಿಂಗನಗೌಡ ಪಾಟೀಲ್ ಅವರ ಬಿಜೆಪಿ ಸೇರ್ಪಡೆ ಕುರಿತು ಅತಿ ಶೀಘ್ರದಲ್ಲಿ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

## ಶ್ರದ್ಧಾ ಭಕ್ತಿಯಿಂದ ಹಿರೇ ಹಳ್ಳದ ಬಸವೇಶ್ವರ ಜಾತ್ರೆ ಅದ್ದೂರಿ



ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ ಪಟ್ಟಣದ ಲಕ್ಷ್ಮಿ ದೇವಿ ಕೆರೆ ಹತ್ತಿರದಲ್ಲಿರುವ ಹಿರೇ ಹಳ್ಳದ ಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ಕಡೆ ಸೋಮವಾರದಂದು ಜಾತ್ರಾ ಮಹೋತ್ಸವ ಸಡಗರ ಸಂಭ್ರಮದಿಂದ ನಡೆಯಿತು.**

ಬೆಳಗಿನ ಜಾವ ಬ್ರಾಹ್ಮಿ ಮುಹೂರ್ತದಲ್ಲಿ ಹಿರೇ ಹಳ್ಳದ ಬಸವೇಶ್ವರ ಮಹಾರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಬಿಲ್ವಪತ್ರೆ, ಪುಷ್ಪ, ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳು ಕಾರ್ಯಕ್ರಮಗಳು ಶ್ರದ್ಧಾ ಭಕ್ತಿಯಿಂದ ನಡೆದವು. ಮಧ್ಯಾಹ್ನ ಆಗಮಿಸಿದ ಭಕ್ತಾದಿಗಳಿಗೆ ಅನ್ನ ಸಂತರ್ಪಣ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮಧ್ಯಾಹ್ನ ಸಂಜೆ 4:00 ಗಂಟೆ ಯಿಂದ ಮುಂಗ್ಯೆ ಆಟ ನಂದಿಕೋಲು ಕುಣಿತ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ನಡೆಸಿ ಈ ವೇಳೆ ಸಾವಿರಾರು ಭಕ್ತಾದಿಗಳು ಆಗಮಿಸಿ ಕಾಯ್ ಕರ್ಪೂರ ದೇವರ ಮಾಡಿಸಿ ದೇವರ ಕೃಪೆಗೆ ಪಾತ್ರರಾದರು.

# ಅಕ್ರಮ ಮದ್ಯ ಮಾರಾಟ ನಿಲ್ಲಿಸಿ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕುಕನೂರು ತಾಲೂಕಿನ ಬೆಣಕಲ್ ಗ್ರಾಮದಲ್ಲಿ ಅಕ್ರಮವಾಗಿ ನಡೆಯುತ್ತಿರುವ ಮದ್ಯ ಮಾರಾಟ ದಂಧೆಗೆ ಕಡಿವಾಣ ಹಾಕಿ ಗ್ರಾಮವನ್ನು ಸಾರಾಯಿ ಮುಕ್ತ ಗ್ರಾಮವನ್ನಾಗಿ ಘೋಷಿಸುವಂತೆ ಆಗ್ರಹಿಸಿ ಫಸಲ್ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆಯ ನೇತೃತ್ವದಲ್ಲಿ ಗ್ರಾಮದ ಮಹಿಳೆಯರು ನಗರದ ಜಿಲ್ಲಾಡಳಿತ ಭವನದಲ್ಲಿ ಸೋಮವಾರ ಡಿಸಿ ಡಾ.ಸುರೇಶ ಇಟ್ನಾಳ್ಗೆ ಮನವಿ ಸಲ್ಲಿಸಿದರು.**

ಅಕ್ರಮ ಸಾರಾಯಿ ಮಾರಾಟದಿಂದ ಗ್ರಾಮದ ಯುವಕರು ಕುಡಿತದ ಚಟಕ್ಕೆ ಬಲಿಯಾಗುತ್ತಿದ್ದು, ಕುಟುಂಬಗಳಲ್ಲಿ ಕೌಟುಂಬಿಕ ಕಲಹಗಳು ಹೆಚ್ಚಾಗಿವೆ. ಇದರಿಂದ ಕುಟುಂಬಗಳ ಆರ್ಥಿಕ ಹಾಗೂ ಸಾಮಾಜಿಕ ನೆಮ್ಮದಿ ಹಾಳಾಗುತ್ತಿದೆ. ಈ ಕುರಿತು ಈ ಹಿಂದೆ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದ್ದರೂ ಅಕ್ರಮ ಮದ್ಯ ಮಾರಾಟಕ್ಕೆ



ಕಡಿವಾಣ ಬಿದ್ದಿಲ್ಲ. ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಅಕ್ರಮ ಸಾರಾಯಿ ಮಾರಾಟ ಸಂಪೂರ್ಣ ನಿಲ್ಲಿಸುವಂತೆ ಡಿಸಿ ಎದುರು ಮಹಿಳೆಯರು ಅವಲತ್ತುಕೊಂಡರು. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಗ್ರಾಮ ಪಂಚಾಯಿತಿ ಕಚೇರಿ ಎದುರು ಸಾರಾಯಿ ಮಾರಾಟ ನಿಷೇಧಿಸುವವರೆಗೆ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಸಂಘದ ಪದಾಧಿಕಾರಿಗಳು ಎಚ್ಚರಿಸಿದರು.

ಈ ವೇಳೆ ಸ್ಥಳದಲ್ಲೇ ಅಬಕಾರಿ ಇಲಾಖೆ ಹಾಗೂ ಪೊಲೀಸ್ ಇಲಾಖೆಗೆ ಕರೆ ಮಾಡಿದ ಜಿಲ್ಲಾಧಿಕಾರಿ ಅವರು, ಕೂಡಲೇ ಬೆಣಕಲ್ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ದಂಧೆಗೆ ಕಡಿವಾಣ ಹಾಕಿ ಎಂದು ಸೂಚನೆ ನೀಡಿದರು. ಸಂಸ್ಥೆಯ ಪ್ರಮುಖರಾದ ರಮೇಶ ಭಜಂತ್ರಿ, ರವಿ ಬನ್ನಿಕೊಪ್ಪ, ಶರಣಪ್ಪ ಜವಳಿ, ಮಲ್ಲಪ್ಪ

> “ ಕುಕನೂರು ತಾಲೂಕಿನ ಬೆಣ–ಕಲ್ ಗ್ರಾಮದಲ್ಲಿ ಅಕ್ರಮವಾಗಿ ನಡೆಯುತ್ತಿರುವ ಮದ್ಯ ಮಾರಾಟ ದಂಧೆಗೆ ಕಡಿವಾಣ ಹಾಕಿ, ‘ಗ್ರಾಮವನ್ನು ಸಾರಾಯಿ ಮುಕ್ತ’ ಗ್ರಾಮವನ್ನಾಗಿ ಘೋಷಿಸುವಂತೆ ಆಗ್ರಹಿಸಿ ಫಸಲ್ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆಯ ನೇತೃತ್ವದಲ್ಲಿ ಗ್ರಾಮದ ಮಹಿಳೆಯರು ಕೊಪ್ಪಳ ನಗರದ ಜಿಲ್ಲಾಡಳಿತ ಭವನದಲ್ಲಿ ಸೋಮವಾರ ಡಿಸಿ ಡಾ.ಸುರೇಶ ಇಟ್ನಾಳ್ ಗೆ ಮನವಿ ಸಲ್ಲಿಸಿದರು.

ಬಳಿಗೇರಿ, ಶಿವು ಮುದೋಳ, ಇಮಾಮಸಾಬ, ನಧಾಫ್, ಫಕೀರಪ್ಪ ವಜ್ರಬಂಡಿ, ಸಿದ್ದಲಿಂಗಪ್ಪ ಲೇಬಗೇರಿ, ಖಜಾಸಾಬ ಕುಕನೂರು, ಬಸಮ್ಮ ಕೋಗಿಲೆ, ಭೀಮಕ್ಕ ಹಂಚಿನಾಳ, ರಾಚಮ್ಮ ಬಳಿಗೇರಿ ಹಾಗೂ ಗ್ರಾಮದ ಮಹಿಳೆಯರು ಸೇರಿದಂತೆ ಇತರರು ಇದ್ದರು.



# ಚಡಚಣದಲ್ಲಿ ಪ್ರಜಾಸೇವೆ ಆಂದೋಲನಕ್ಕೆ ಚಾಲನೆ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ಜನರು ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಅವರ ಸಮಸ್ಯೆಗಳನ್ನು ಸ್ಥಳದಲ್ಲೇ ಆಲಿಸಿ ಪರಿಹಾರ ಒದಗಿಸುವ ಉದ್ದೇಶದಿಂದ ಪ್ರಜಾಸೇವೆ ಆಂದೋಲನ ಆರಂಭಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಹೇಳಿದರು.**

**ಚಡಚಣ ಪಟ್ಟಣದ ಗುರುಕೃಪ ಮಂಗಲ ಕಾರ್ಯಾಲಯದಲ್ಲಿ ಶನಿವಾರ ಜಿಲ್ಲಾ ಮಟ್ಟದ ಪ್ರಜಾಸೇವೆ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಾರ್ವಜನಿಕರ ಅರ್ಜಿ ಮತ್ತು ದೂರುಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ನಿಯಮಾನುಸಾರ ತ್ವರಿತವಾಗಿ ವಿಲೇವಾರಿ ಮಾಡಬೇಕು ಎಂದು ಸೂಚಿಸಿದರು.**

ಪ್ರಜಾಸೇವೆ ಆಂದೋಲನದ ಮೂಲಕ ವಿವಿಧ ಇಲಾಖೆಗಳ ಕಚೇರಿಗಳಿಗೆ ಅಲೆದಾಡದೆ ಒಂದೇ ಸ್ಥಳದಲ್ಲಿ ಅರ್ಜಿ, ದೂರು ಹಾಗೂ ಮನವಿಗಳನ್ನು ಸಲ್ಲಿಸಲು ಅವಕಾಶವಿದೆ. ಇದರಿಂದ ಜನರ ಸಮಯ, ಹಣ ಮತ್ತು ಶ್ರಮ ಉಳಿತಾಯವಾಗಲಿದೆ. ಪಿಂಚಣಿ, ವಸತಿ, ಜಮೀನು, ಕುಡಿಯುವ ನೀರು, ರಸ್ತೆ, ವಿದ್ಯುತ್, ಆರೋಗ್ಯ, ಶಿಕ್ಷಣ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಇದು ಉತ್ತಮ ವೇದಿಕೆಯಾಗಿದೆ ಎಂದರು. ಪಹಣಿ ತಿದ್ದುಪಡಿ, ಪೋಡಿ, ಖಾತೆ ಬದಲಾವಣೆ,



ವಸತಿ ನಿವೇಶನ, ಹೊಸ ಪಡಿತರ ಚೀಟಿ, ರಸ್ತೆ ಅಭಿವೃದ್ಧಿ ಹಾಗೂ ಪೊಲೀಸ್ ಇಲಾಖೆಗೆ ಸಂಬಂಧಿಸಿದ ಅರ್ಜಿಗಳನ್ನು ಸ್ವೀಕರಿಸಿ, ಅರ್ಜಿದಾರರಿಗೆ ಐಡಿ ನೀಡಿ ಸಂಬಂಧಿಸಿದ ಇಲಾಖೆಗೆ ವರ್ಗಾಯಿಸಿ ಪರಿಹಾರ ಕಲ್ಪಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಶೇ.60ರಷ್ಟು ಮಳೆ ಕೊರತೆಯಾಗಿದ್ದು, ಮಳೆಯಾಧಾರಿತ ಬೆಳೆಗಳಿಗೆ ಭಾರಿ ಹಾನಿಯಾಗಿದೆ. ರೈತರು ಸಾಲ ಮಾಡಿಕೊಂಡು ಎರಡು ಬಾರಿ ಬಿತ್ತನೆ ಮಾಡಿದರೂ ಬೆಳೆ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಬರ ಘೋಷಣೆಯಾಗದ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಲು ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು. ಕೆರೆ ತುಂಬುವ ಯೋಜನೆಯಡಿ ಈ ಭಾಗದ ಕೊನೆಯ ಹಂತದವರೆಗೂ ನೀರು ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು.

ಜಿಲ್ಲೆಯ ಅಭಿವೃದ್ಧಿಗೆ ಎಲ್ಲ ಶಾಸಕರು ಹಾಗೂ ಅಧಿಕಾರಿಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಹೇಳಿದರು.

ಪ್ರಜಾಸೇವೆ ಆಂದೋಲನದಲ್ಲಿ ಸಚಿವರು ಸಾರ್ವಜನಿಕರಿಂದ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ, ಹಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಪಶು ಆಸ್ಪತ್ರೆ ಮಂಜೂರು, ರಸ್ತೆ ಅಭಿವೃದ್ಧಿ, ಜೆಜೆಎಂ ಕಾಮಗಾರಿ, ಹಕ್ಕುಪತ್ರ, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಕಾಲುದಾರಿ, ಭೂಸ್ವಾಧೀನ ಪರಿಹಾರ, ಪಿಂಚಣಿ, ವಿದ್ಯುತ್ ಪರಿವರ್ತಕ ಸೇರಿದಂತೆ ವಿವಿಧ ಮನವಿಗಳನ್ನು ಪರಿಶೀಲಿಸಲಾಯಿತು. ಕೆಲವು ಪ್ರಕರಣಗಳಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಸಮಗ್ರ ವರದಿ ನೀಡುವಂತೆ ಸಚಿವರು ಸೂಚಿಸಿದರು.

ಶಾಸಕ ವಿಠ್ಠಲ ಕಟಕಧೋಂಡ ಮಾತನಾಡಿ, ಪ್ರಜಾಸೇವೆ ಆಂದೋಲನವು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಪರಿಹರಿಸಲು ರೂಪಿಸಿರುವ ಜನಪರ ಕಾರ್ಯಕ್ರಮವಾಗಿದೆ. ಕ್ಷೇತ್ರದ ಶೇ.80ರಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಉಳಿದ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲಾಗುವುದು. ಚಡಚಣ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಜಿಲ್ಲಾಧಿಕಾರಿ ಡಾ. ಆನಂದ ಕೆ. ಮಾತನಾಡಿ, ತಾಲೂಕು ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಮೊದಲ ಹಾಗೂ ಮೂರನೇ ಶನಿವಾರ ಪ್ರಜಾಸೇವೆ ಆಂದೋಲನ ನಡೆಸಲಾಗುವುದು. ಹೋಬಳಿ ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಜನರ ಬಳಿಗೆ ತೆರಳಿ ಅಹವಾಲು ಸ್ವೀಕರಿಸಲಾಗುವುದು. ಅರ್ಜಿಗಳ ತ್ವರಿತ ವಿಲೇವಾರಿ ಕುರಿತು ಪ್ರತಿ ಬುಧವಾರ ಅವಲೋಕನ ಸಭೆ ನಡೆಸಲಾಗುವುದು ಎಂದರು.

ಚಡಚಣದಲ್ಲಿ ನಡೆದ ಆಂದೋಲನದಲ್ಲಿ ವಿವಿಧ ಇಲಾಖೆಗಳ ವ್ಯಾಪ್ತಿಗೆ ಸಂಬಂಧಿಸಿದ ಒಟ್ಟು 209 ಅರ್ಜಿಗಳನ್ನು ಸ್ವೀಕರಿಸಲಾಯಿತು. ಕಂದಾಯ ಇಲಾಖೆಗೆ 49, ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ 33, ಲೋಕೋಪಯೋಗಿ ಇಲಾಖೆಗೆ 25, ತಾಲೂಕು ಪಂಚಾಯತಿಗೆ 23 ಹಾಗೂ ಸರ್ವೇ ಇಲಾಖೆಗೆ 18 ಅರ್ಜಿಗಳು ಸಲ್ಲಿಕೆಯಾಗಿವೆ. ಕೃಷಿ ಇಲಾಖೆಗೆ 14, ಹೆಸ್ಕಾಂ ಮತ್ತು ಪಟ್ಟಣ ಪಂಚಾಯತಿಗೆ ತಲಾ 10, ಶಿಕ್ಷಣ ಇಲಾಖೆಗೆ 7 ಹಾಗೂ ಸಾರಿಗೆ ಇಲಾಖೆಗೆ 6 ಅರ್ಜಿಗಳು ಬಂದಿವೆ. ಉಳಿದ ಅರ್ಜಿಗಳು ವಿವಿಧ ಇಲಾಖೆಗಳಿಗೆ ಸಂಬಂಧಿಸಿದ್ದಾಗಿವೆ. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಆರ್. ಗಿರೀಶ್, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಚಡಚಣ ತಹಶೀಲ್ದಾರ್ ಸಂಜಯ ಇಂಗಳೆ ಸೇರಿದಂತೆ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಮಹಿಳಾ ರಥೋತ್ಸವಕ್ಕೆ ಸ್ವಾಗತ–ಮಹಾದೇವ ಶ್ರೀ

ಅ.ಶ. ಸುದ್ದಿ ಕುಕನೂರು

**ಕುಕನೂರ: ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದ ಕುಕನೂರು ಶಾಖಾಮಠದ ವತಿಯಿಂದ ಶ್ರೀ ಜಗದ್ಗುರು ಅನ್ನದಾನೀಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಸೆಪ್ಟೆಂಬರ್ 8ರಂದು ಸಂಜೆ 5 ಗಂಟೆಗೆ ಮಹಿಳಾ ರಥೋತ್ಸವ ಭಕ್ತಿಭಾವದಿಂದ ನಡೆಯಲಿದೆ.**



ಈ ಬಾರಿಯ ಮಹಿಳಾ ರಥೋತ್ಸವವು ಹಲವು ವಿಶೇಷ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದ್ದು, ಮಹಿಳೆಯರಿಗೆ ಉಡಿತುಂಬುವ ಕಾರ್ಯಕ್ರಮ, ಬಳೆಯಿಡಿಸುವ ಕಾರ್ಯಕ್ರಮ ಹಾಗೂ ಬಾಗಿನ ನೀಡುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಮಹಿಳೆಯರ ಸೌಭಾಗ್ಯ, ಸಮೃದ್ಧಿ ಮತ್ತು ಕುಟುಂಬದ ಮಂಗಳಕ್ಕಾಗಿ ನಡೆಯುವ ಈ ಸಂಪ್ರದಾಯಬದ್ಧ ಕಾರ್ಯಕ್ರಮಗಳು ವಿಶೇಷ ಆಕರ್ಷಣೆಯಾಗಲಿವೆ. ಇದರ ಜೊತೆಗೆ ಮಹಿಳಾ ಕುಂಭೋತ್ಸವವೂ ನಡೆಯಲಿದ್ದು, ಮಹಿಳೆಯರು ಸಾಂಪ್ರದಾಯಿಕ ಉಡುಗೆಯಲ್ಲಿ ತಲೆಯ ಮೇಲೆ ಪೂರ್ಣಕುಂಭ ಹೊತ್ತು ಭಕ್ತಿಭಾವದಿಂದ ಪಾಲ್ಗೊಳ್ಳಲಿದ್ದಾರೆ. ಕುಂಭೋತ್ಸವದ ಮೂಲಕ ಭಕ್ತಿ, ಶ್ರದ್ಧೆ ಹಾಗೂ ಮಹಿಳಾ ಶಕ್ತಿಯ ವೈಭವವನ್ನು ಸಾರಲಾಗುವುದು. ಜಾತ್ರಾ ಮಹೋತ್ಸವದ ಅಂಗವಾಗಿ ಅಯ್ಯಾಚಾರ ಹಾಗೂ ಲಿಂಗದೀಕ್ಷಾ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೂ ನಡೆಯಲಿವೆ. ರಥೋತ್ಸವದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀ ಅನ್ನದಾನೀಶ್ವ

## 'ವಚನಾಮೃತ'

ಸಾಯದೆ ಸತ್ತಳೆಂದು ಮಿಗರ್ದ ಖುಷಿ
ಪಡುವರ್ ಹಿಂಡ್ಕಂಡು ಸೋಜಿಗವು
ನೋಡಾ!.
ವಿಷಕಂಠನೆ ವಿಷನುಂಗಿ
ಜೊತೆಗಿರುವಾಗ ವಿಷವಿಕ್ಕುವವ ಬಗೆ
ಚಿಂತೇಕೆ ಸತ್ಯವಾಣಿ!!.



ವಾಣಿ ಭಂಡಾರಿ.

## ಅಗ್ನಿವೀರ ನೇಮಕಾತಿ ರ್‍ಯಾಲಿಗೆ ಸಕಲ ಸಿದ್ಧತೆ: ಜಿಲ್ಲಾಧಿಕಾರಿ ಡಾ. ಆನಂದ್ ಕೆ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸೆ.10ರಿಂದ 23ರವರೆಗೆ ನಡೆಯಲಿರುವ ಭಾರತೀಯ ಸೇನೆಯ ಅಗ್ನಿವೀರ ನೇಮಕಾತಿ ರ?ಯಾಲಿಯ ಪೂರ್ವಸಿದ್ಧತೆಗಳನ್ನು ಜಿಲ್ಲಾಧಿಕಾರಿ ಡಾ. ಆನಂದ್ ಕೆ. ಸೋಮವಾರ ಪರಿಶೀಲಿಸಿದರು.**

ವಿವಿಧ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಆಗಮಿಸುವ ನಿರೀಕ್ಷೆಯಿರುವುದರಿಂದ ಅವರಿಗೆ ಯಾವುದೇ ತೊಂದರೆಯಾಗದಂತೆ ಕುಡಿಯುವ ನೀರು, ವಿದ್ಯುತ್, ಬೆಳಕು, ಶೌಚಾಲಯ, ಸ್ವಚ್ಛತೆ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸುವಂತೆ ಅಧಿಕಾರಿಗಳಿಗೆ, ಅಭ್ಯರ್ಥಿಗಳಿಗಾಗಿ ಕ್ರೀಡಾಂಗಣದಲ್ಲಿ ವೈದ್ಯಕೀಯ ಸಿಬ್ಬಂದಿ ಹಾಗೂ



ಆಂಬುಲೆನ್ಸ್ ವ್ಯವಸ್ಥೆ ಸಿದ್ಧವಾಗಿರಬೇಕು. ದಾಖಲೆಗಳ ಪರಿಶೀಲನೆಯನ್ನು ತ್ವರಿತವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಅಗತ್ಯ ಸಿಬ್ಬಂದಿ ನಿಯೋಜಿಸುವಂತೆ ಶಿಕ್ಷಣ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಅಭ್ಯರ್ಥಿಗಳು ಹಾಗೂ ಅವರ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಸಾಧ್ಯತೆಯಿರುವುದರಿಂದ ಸಂಚಾರ ದಟ್ಟಣೆ ನಿಯಂತ್ರಣ, ವಾಹನ ನಿಲುಗಡೆ ಹಾಗೂ ಜನದಟ್ಟಣೆ ನಿರ್ವಹಣೆಗೆ ಪೊಲೀಸ್ ಇಲಾಖೆ ವಿಶೇಷ ಕ್ರಮ ಕೈಗೊಳ್ಳಬೇಕು, ನೇಮಕಾತಿ ರ್‍ಯಾಲಿ ಜಿಲ್ಲೆಯ ಪ್ರತಿಷ್ಠಿತ ಕಾರ್ಯಕ್ರಮವಾಗಿದ್ದು, ಯುವಜನರಿಗೆ ಭಾರತೀಯ ಸೇನೆಗೆ ಸೇರ್ಪಡೆಯಾಗಲು ದೊರೆಯುವ ಮಹತ್ವದ ಅವಕಾಶವಾಗಿದೆ.

ಹೀಗಾಗಿ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ನೇಮಕಾತಿ ಪ್ರಕ್ರಿಯೆ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು. ಈ ಸಂದರ್ಭದಲ್ಲಿ ಆರ್ಮಿ ರಿಕ್ರೂಟ್‌ಮೆಂಟ್ ಕಚೇರಿಯ ನಿರ್ದೇಶಕ ಕರ್ನಲ್ ಜಿ. ಸೋಮು ಮಹಾರಾಜನ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸೇನಾ ನೇಮಕಾತಿ ಅಧಿಕಾರಿಗಳು ಉಪಸ್ಥಿತರಿದ್ದರು.

## ಶ್ರೀ ಫಕಿರೇಶ್ವರ ಜಾತ್ರೆಯಲ್ಲಿ ಭಕ್ತಿ–ಭಾವೈಕ್ಯತೆಯ ಸಂಭ್ರಮ



ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಪಟ್ಟಣದ ಶಿರೋಳ ಸೀಮೆಯ ಶ್ರೀ ಜಗದ್ಗುರು ಫಕಿರೇಶ್ವರ ಜಾತ್ರಾ ಮಹೋತ್ಸವ ಶ್ರಾವಣ ಮಾಸದ ಕೊನೆಯ ಐದನೇ ಸೋಮವಾರದಂದು ಶ್ರದ್ಧಾಭಕ್ತಿ ಹಾಗೂ** ಸಂಭ್ರಮದಿಂದ ಜರುಗಿತು. ಇಟಗಿ ಭೂಕೈಲಾಸ ಗದ್ದುಗೆಮಠದ ಶ್ರೀ ಶಾಂತವೀರ ಶಿವಾಚಾರ್ಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ 12 ಜಂಗಮವಟುಗಳಿಗೆ ಅಯ್ಯಾಚಾರ (ಶಿವದೀಕ್ಷೆ) ನೀಡಲಾಯಿತು.

ದೇವಸ್ಥಾನದ ಗದ್ದುಗೆ ಹಾಗೂ ಉತ್ಸವ ಮೂರ್ತಿಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಶ್ರೀ ನಾಗದೇವರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ದೀಕ್ಷಾ ಕಾರ್ಯಕ್ರಮದಲ್ಲಿ ಶ್ರೀ ಶಾಂತವೀರ ಶಿವಾಚಾರ್ಯ ಮಹಾಸ್ವಾಮಿಗಳು, ಲೋಟಗೇರಿ ಕಣಕಾಮಠದ ಶ್ರೀ ಗುರುಮೂರ್ತಿ ದೇವರು ಹಾಗೂ ಕವಡಿಮಟ್ಟಿಯ ಬಸವಪ್ರಭು ಹಿರೇಮಠ ಗುರುಗಳು ಆಶೀರ್ವಚನ ನೀಡಿ, ಲಿಂಗದೀಕ್ಷೆ ಪಡೆದವರು ಧರ್ಮಪರಿಪಾಲನೆ, ಸನ್ಮಾರ್ಗ ಹಾಗೂ ಸತ್ಯಶುದ್ಧ ಕಾಯಕಕ್ಕೆ ಆದ್ಯತೆ ನೀಡಬೇಕು. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು ಎಂದು ಕರೆ ನೀಡಿದರು.

ದೇವಾಲಯದ ಹಿನ್ನೆಲೆಯನ್ನು ಚನ್ನವೀರ ಶಿವಯೋಗಿಮಠ ವಿವರಿಸಿದರು. ದೇವಾಲಯದ ಜೀರ್ಣೋದ್ಧಾರ ಹಾಗೂ ಸಭಾಭವನ–ಪ್ರಾಂಗಣ ಅಭಿವೃದ್ಧಿಗೆ ದೇಣಿಗೆ ನೀಡುವಂತೆ ಡಾ. ಚಂದ್ರಶೇಖರ ಶಿವಯೋಗಿಮಠ ಮನವಿ ಮಾಡಿದರು. ಹಿಂದೂ–ಮುಸ್ಲಿಂ ಭಾವೈಕ್ಯತೆಗೆ ಹೆಸರಾಗಿರುವ ಈ ಜಾತ್ರೆಯಲ್ಲಿ ಎರಡೂ ಸಮುದಾಯಗಳ ಭಕ್ತರು ಒಂದಾಗಿ ಪಾಲ್ಗೊಂಡು ದೇವರ ದರ್ಶನ ಪಡೆದರು. ಸಿದ್ದಯ್ಯಾ ಗಣಾಚಾರಿ, ಅರವಿಂದ ಲದ್ದಿಮಠ, ಶಿವಾನಂದ ಹಿರೇಮಠ, ಕುಮಾರಸ್ವಾಮಿ ಶಿವಯೋಗಿಮಠ, ಶ್ರೀಶೈಲ್ ಶಿವಯೋಗಿಮಠ, ಶಿವನಗೌಡ ಪಾಟೀಲ್, ಹಣಮಂತಗೌಡ ರಾಯಗೊಂಡ, ಶಾಂತಯ್ಯಾ ಶಿವಯೋಗಿಮಠ, ಬಸಯ್ಯಾ ಶಿವಯೋಗಿಮಠ, ರಾಮಣ್ಣ ರಾಜನಾಳ, ಅಪ್ಪು ಮದರಿ, ರತ್ನಾ ಶಿವಯೋಗಿಮಠ, ಪೂಜಾ ಶಿವಯೋಗಿಮಠ, ಪೂರ್ಣಿಮಾ ಶಿವಯೋಗಿಮಠ, ಗೌರಮ್ಮ ಶಿವಯೋಗಿಮಠ, ಮಂಜುಳಾ ಶಿವಯೋಗಿಮಠ ಸೇರಿದಂತೆ ನೂರಾರು ಭಕ್ತರು ಭಾಗವಹಿಸಿದ್ದರು.

## ಈ ತಿಂಗಳಲ್ಲೇ 30ಕ್ಕೂ ಹೆಚ್ಚು ಮಂದಿಗೆ ನಾಯಿ ಕಡಿತ; ಪಟ್ಟಣ ಪಂಚಾಯಿತಿ ವಿರುದ್ಧ ಸಾರ್ವಜನಿಕರ ಆಕ್ರೋಶ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಬೀದಿ ನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸಾರ್ವಜನಿಕರು ಆತಂಕದಲ್ಲಿ ಜೀವನ ಸಾಗಿಸುವಂತಾಗಿದೆ. ಬೀದಿ ನಾಯಿಗಳ ಗುಂಪುಗಳು ರಾತ್ರಿ–ಹಗಲು ಎನ್ನದೆ ಸಾರ್ವಜನಿಕರ ಮೇಲೆ ದಾಳಿ ಮಾಡುತ್ತಿರುವ ಆರೋಪಗಳು ಕೇಳಿಬರುತ್ತಿದ್ದು, ಕೂಡಲೇ ನಿಯಂತ್ರಣ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಪಟ್ಟಣ ಪಂಚಾಯಿತಿ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.**

ಇತ್ತೀಚೆಗೆ ಕನಕಗಿರಿ ಪಟ್ಟಣದ ಕಾಳಿಕಾದೇವಿ ದೇವಸ್ಥಾನದ ಅರ್ಚಕರಾದ ಮಲ್ಲಪ್ಪ ತಂದೆ ಯಮುನಪ್ಪ (56) ಅವರು ರಾತ್ರಿ ದೇವಸ್ಥಾನದ ಪೂಜಾ ಕಾರ್ಯ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ವೇಳೆ ಬೀದಿ ನಾಯಿಯೊಂದು ಏಕಾಏಕಿ ಅವರ ಮೇಲೆ ಕ್ರೂರವಾಗಿ ದಾಳಿ ಮಾಡಿದೆ. ನಾಯಿಯ ದಾಳಿಯಿಂದ ಗಾಯಗೊಂಡ ಮಲ್ಲಪ್ಪ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ ಎಂದು ತಿಳಿದುಬಂದಿದೆ. ಪಟ್ಟಣದಲ್ಲಿ ಬೀದಿ ನಾಯಿಗಳ ಸಮಸ್ಯೆ ಕುರಿತು ಸಾರ್ವಜನಿಕರು ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಪದೇಪದೇ ಮಾಹಿತಿ ನೀಡಿ, ಕ್ರಮ ಕೈಗೊಳ್ಳುವಂತೆ ಮನವಿ ಮಾಡುತ್ತಿದ್ದರೂ ಇದುವರೆಗೂ ಶಾಶ್ವತ ಪರಿಹಾರ ದೊರೆತಿಲ್ಲ ಎಂಬುದು ಸಾರ್ವಜನಿಕರ ಆರೋಪವಾಗಿದೆ.

ಈ ತಿಂಗಳೊಂದರಲ್ಲೇ ಸುಮಾರು 30ಕ್ಕೂ



ಹೆಚ್ಚು ಜನರಿಗೆ ಬೀದಿ ನಾಯಿಗಳು ಕಚ್ಚಿದ್ದು, ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ಶಾಲಾ ಮಕ್ಕಳ ಸುರಕ್ಷತೆ ಬಗ್ಗೆ ಆತಂಕ ಬೆಳಗಿನ ಹಾಗೂ ಸಂಜೆ ಸಮಯದಲ್ಲಿ ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು, ಸಣ್ಣ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಬೀದಿ ನಾಯಿಗಳ ಹಾವಳಿಯಿಂದ ಭಯಭೀತರಾಗಿದ್ದಾರೆ. ಗುಂಪು ಗುಂಪಾಗಿ ಸಂಚರಿಸುವ ನಾಯಿಗಳು ಮಕ್ಕಳನ್ನು ಕಂಡು ಬೆನ್ನಟ್ಟುತ್ತಿರುವ ಘಟನೆಗಳು ನಡೆಯುತ್ತಿದ್ದು, ಯಾವುದೇ ಸಮಯದಲ್ಲಿ ಗಂಭೀರ ಅನಾಹುತ ಸಂಭವಿಸುವ ಸಾಧ್ಯತೆ ಇದೆ ಎಂದು ಸಾರ್ವಜನಿಕರು ಎಚ್ಚರಿಸಿದ್ದಾರೆ.

ವಿಶೇಷವಾಗಿ ರಾತ್ರಿ ವೇಳೆಯಲ್ಲಿ ದೇವಸ್ಥಾನಗಳು, ಬಡಾವಣೆಗಳು ಹಾಗೂ ಪ್ರಮುಖ ರಸ್ತೆಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು,





ಒಂಟಿಯಾಗಿ ಸಂಚರಿಸುವ ಜನರು ಆತಂಕದಿಂದಲೇ ಮನೆಗೆ ತೆರಳಬೇಕಾದ ಪರಿಸ್ಥಿತಿ ಎದುರಾಗಿದೆ. ದ್ವಿಚಕ್ರ ವಾಹನ ಸವಾರರಿಗೆ ತಲೆನೋವಾದ ನಾಯಿಗಳು ಬೀದಿ ನಾಯಿಗಳ ಹಾವಳಿ ಕೇವಲ ಪಾದಚಾರಿಗಳಿಗೆ ಮಾತ್ರವಲ್ಲದೆ ದ್ವಿಚಕ್ರ ವಾಹನ ಸವಾರರಿಗೂ ಸಮಸ್ಯೆಯಾಗಿದೆ. ಬೈಕ್ ಹಾಗೂ ಸ್ಕೂಟರ್‌ಗಳ ಹಿಂದೆ ನಾಯಿಗಳು ಓಡಿಬರುವುದರಿಂದ ಸವಾರರು ಗಾಬರಿಗೊಂಡು ವಾಹನದ ನಿಯಂತ್ರಣ ಕಳೆದುಕೊಳ್ಳುವ ಸಾಧ್ಯತೆ ಇದೆ. ಇದರಿಂದ ಅಪಘಾತಗಳು ಸಂಭವಿಸುವ ಭೀತಿ ಸಾರ್ವಜನಿಕರಲ್ಲಿ ಮೂಡಿದೆ.

ರಾತ್ರಿ ವೇಳೆಯಲ್ಲಿ ಏಕಾಏಕಿ ರಸ್ತೆಗೆ ಅಡ್ಡಲಾಗಿ ಬರುವ ನಾಯಿಗಳಿಂದ ವಾಹನ ಸವಾರರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಸಮಸ್ಯೆಗೆ ಶೀಘ್ರ ಪರಿಹಾರ ಕಲ್ಪಿಸದಿದ್ದರೆ ಮುಂದಿನ ದಿನಗಳಲ್ಲಿ ದೊಡ್ಡ ಅನಾಹುತ ಸಂಭವಿಸುವ ಸಾಧ್ಯತೆಯಿದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ. ಪಟ್ಟಣ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಆಕ್ರೋಶ ಬೀದಿ ನಾಯಿಗಳ ಸಮಸ್ಯೆ ಕುರಿತು ಹಲವು ಬಾರಿ ಪಟ್ಟಣ ಪಂಚಾಯಿತಿ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಸೂಕ್ತ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಜನರಿಗೆ ರಕ್ಷಣೆ ನೀಡಬೇಕಾದ ಸ್ಥಳೀಯ ಆಡಳಿತ ವ್ಯವಸ್ಥೆ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು ಹಾಗೂ ಸಂಬಂಧಿಸಿದ ಸಿಬ್ಬಂದಿ ಕೂಡಲೇ ಸ್ಥಳಕ್ಕೆ ಭೇಟಿ ನೀಡಿ, ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ನಾಯಿಗಳ ನಿಯಂತ್ರಣಕ್ಕೆ ಸರ್ಕಾರದ ನಿಯಮಾವಳಿಗಳಂತೆ ಅಗತ್ಯ ಕ್ರಮ, ಸಂತಾನ ನಿಯಂತ್ರಣ, ಅಪಾಯಕಾರಿ ನಾಯಿಗಳ ಕುರಿತು ಸೂಕ್ತ ವ್ಯವಸ್ಥೆ ಹಾಗೂ ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಇದಕ್ಕೆ ಕೊನೆ ಯಾವಾಗ?" ಎಂಬುವುದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಕನಕಪ್ಪ ಮಾಗಡಿ ಕನಕಗಿರಿ ಅವರ ಪ್ರಶ್ನೆ ! "ಪ್ರತಿದಿನ ಬೀದಿ ನಾಯಿಗಳ ಭಯದಲ್ಲೇ ಓಡಾಡುವಂತಾಗಿದೆ. ಇಂದು ಒಬ್ಬರಿಗೆ, ನಾಳೆ ಮತ್ತೊಬ್ಬರಿಗೆ ನಾಯಿ ಕಚ್ಚುವ ಘಟನೆಗಳು ನಡೆಯುತ್ತಿವೆ. ಸಣ್ಣ ಮಕ್ಕಳು, ಶಾಲಾ ಮಕ್ಕಳು ಮತ್ತು ವೃದ್ಧರಿಗೆ ಏನಾದರೂ ಅಪಾಯ ಸಂಭವಿಸಿದ ನಂತರ ಕ್ರಮ ಕೈಗೊಳ್ಳುವುದಕ್ಕಿಂತ ಮುನ್ನವೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು" ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. "ಬೀದಿ ನಾಯಿಗಳ ಹಾವಳಿಗೆ ಕೊನೆ ಯಾವಾಗ?" ಎಂಬುದು ಇದೀಗ ಕನಕಗಿರಿ ಪಟ್ಟಣದ ಜನತೆಗೆ ಹಾಗೂ ದ್ವಿಚಕ್ರ ವಾಹನ ಸವಾರರಿಗೆ ಯಕ್ಷಪ್ರಶ್ನೆಯಾಗಿ ಕಾಡುತ್ತಿದೆ. ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಸಾರ್ವಜನಿಕರ ಆತಂಕ ನಿವಾರಿಸಬೇಕೆಂಬುದು ನಾಗರಿಕರ ಒಕ್ಕೊರಲಿನ ಆಗ್ರಹವಾಗಿದೆ.

# ಲೇಖಕರ ದಿನಚರಿ...

## ಪರಿಸರ ಸಂರಕ್ಷಣೆ : ಮಾನವಸಂಕುಲದ ಯೋಗ್ಯ ಮುಂದುವರಿಕೆಗೆ ಭೂದೇವಿಗೆ ಅರ್ಪಿಸುವ ದಕ್ಷಿಣೆ

**ಮನುಷ್ಯರಿಲ್ಲದೆ ಸಸ್ಯಗಳೂ, ಪ್ರಾಣಿಗಳು ಇರಬಲ್ಲವು, ಆದರೆ ಇವುಗಳ ನೆರವಿಲ್ಲದೆ ಮನಷ್ಯ ಬದುಕಲಾರ. ನಾವು ಪ್ರಕೃತಿಯನ್ನು ಹೇಗೆ ರಕ್ಷಿಸಬಹುದು? ಇದಕ್ಕೆ ಉತ್ತರ ನಾವು ಮಾನವರಾಗಿ ಬದುಕುವ ಶೈಲಿಯಲ್ಲೇ ಅಡಗಿದೆ. ನಾವು ಪ್ರಕೃತಿಯೊಂದಿಗೆ ಹೊಂದಾಣಿಕೆಯಿಂದ ಬದುಕಬೇಕು. ಪ್ರಾಣಿಗಳು, ಸಸ್ಯಗಳು, ಮಣ್ಣು ಮತ್ತು ನೀರು ನಮ್ಮ ಆರೋಗ್ಯ ಮತ್ತು ಸುಖಜೀವನಕ್ಕೆ ಅತ್ಯಂತ ಮುಖ್ಯವಾಗಿವೆ. ಪರಿಸರವು ನಮ್ಮ ಜೀವನದ ಆಧಾರವಾಗಿದೆ.**

ಭೂಮಿಯ ಮೇಲಿರುವ ವಿವಿಧ ಜೀವಜಾತಿಗಳು, ಸಸ್ಯಗಳು, ಪ್ರಾಣಿಗಳು ಹಾಗೂ ಅವುಗಳ ಆವಾಸಸ್ಥಾನಗಳು ಪ್ರಕೃತಿಯ ಸಮತೋಲನವನ್ನು ಕಾಪಾಡುತ್ತವೆ. ಜೀವ ವೈವಿಧ್ಯತೆ ಹೆಚ್ಚಿದಷ್ಟೂ ಪರಿಸರವು ಆರೋಗ್ಯಕರವಾಗಿರುತ್ತದೆ. ಪ್ರತಿ ವರ್ಷವೂ ಜೂನ್ 5 ರಂದು ಪರಿಸರ ದಿನವನ್ನು ಆಚರಿಸಿ ಗಿಡಗಳನ್ನು ನೆಡಲು ಉತ್ಸಾಹ ತೋರುವುದನ್ನು ಹೆಚ್ಚಾಗಿ ಕಂಡಿದ್ದೇವೆ. ಆದರೆ ನೆಟ್ಟ ಗಿಡಗಳ ಪೋಷಣೆ ಮಾಡಿ ಮುಂಬರುವ ಪೀಳಿಗೆಗೆ ಉಳಿಸುವ ಮನಸ್ಸು ಮಾಡಿರುವವರ ಸಂಖ್ಯೆ ಬೆರಳೆಣಿಕೆಯಷ್ಟಿದೆ ಎಂದರೆ ತಪ್ಪಾಗಲಾರದು. ಮತ್ತು ಪರಿಸರ ಎಂದರೆ ಗಿಡ ? ಮರಗಳು ಮಾತ್ರವಲ್ಲ. ಹಲವು ಜೀವವೈವಿಧ್ಯತೆಯನ್ನು ಒಳಗೊಂಡಿರುವುದೇ ಪರಿಸರ. ನಮ್ಮ ಪರಿಸರದ ಅರಿವು ಮತ್ತು ಸಂರಕ್ಷಣೆಯ ಜ್ಞಾನವಿಲ್ಲದಿದ್ದರೆ, ಆಗುವ ಅನಾಹುತಗಳಿಗೆ ಮಾನವ ಪೀಳಿಗೆಯೂ ಅಸಹಾಯಕತೆಯಲ್ಲಿ ಅಂತ್ಯಗೊಳ್ಳುವುದು ದಿಟ.

ಜೀವಜಾತಿಗಳ ಮತ್ತು ಆವಾಸಸ್ಥಾನಗಳ ವೈವಿಧ್ಯತೆ ಇರುವ ಈ ಜಗತ್ತಿನಲ್ಲಿ ಎಲ್ಲಾ ಬಗೆಯ ಸಸ್ಯಗಳು ಮತ್ತು ಪ್ರಾಣಿಗಳು ಬೆಳೆಯಲು ಗಾಳಿ, ನೀರು, ಬೆಳಕು ಮತ್ತು ಪೋಷಕಾಂಶಗಳು ಅಗತ್ಯವಾಗಿವೆ. ಹಸಿರು ಸಸ್ಯಗಳು ದ್ಯುತಿಸಂಶ್ಲೇಷಣೆ (ಞuಠಿಟಿಥಿಟ–ಣuಞu) ಎಂಬ ಸಂಕೀರ್ಣ ರಾಸಾಯನಿಕ ಪ್ರಕ್ರಿಯೆಯ ಮೂಲಕ ತಮ್ಮ ಬೆಳವಣಿಗೆ ಮತ್ತು ಬದುಕಿಗೆ ಬೇಕಾದ ಶಕ್ತಿಯನ್ನು ತಾವೇ ಉತ್ಪಾದಿಸಿಕೊಳ್ಳುತ್ತವೆ. ಆದ್ದರಿಂದ ಸಸ್ಯಗಳು ಆಹಾರ ಸರಪಳಿಯ ಮೊದಲ ಕೊಂಡಿಂ–ಯಾಗಿವೆ. ಪ್ರಾಣಿಗಳು ಶಕ್ತಿಯನ್ನು ಪಡೆಯಲು ನೀರನ್ನು ಕುಡಿಯಬೇಕು ಮತ್ತು ಸಸ್ಯಗಳನ್ನು ಅಥವಾ ಇತರ ಪ್ರಾಣಿಗಳನ್ನು ಆಹಾರವಾಗಿ ಸೇವಿಸಬೇಕು. ಆದ್ದರಿಂದ ಅವು ಆಹಾರ ಸರಪಳಿಯ ಮುಂದಿನ ಹಂತದಲ್ಲಿರುತ್ತವೆ.

ಕೆಲವು ಪ್ರಾಣಿಗಳು, ಉದಾಹರಣೆಗೆ ಒಂಟೆಗಳು, ಹಲವಾರು ದಿನಗಳವರೆಗೆ ನೀರು ಕುಡಿಯದೆ ಬದುಕಬಲ್ಲವು. ಅವು ಅತ್ಯಲ್ಪ ನೀರು ದೊರೆಯುವ ಮರುಭೂಮಿ ಪ್ರದೇಶಗಳಲ್ಲಿ ವಾಸಿಸುವುದರಿಂದ, ತಮ್ಮ



ವಾಸಸ್ಥಾನದ ವಿಶೇಷ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ವಿಕಸನಗೊಂಡಿವೆ. ಹಾಗೆಯೇ ಆಳವಾದ ಸಮುದ್ರಗಳ ತಳಭಾಗಕ್ಕೆ ಬಹಳ ಕಡಿಮೆ ಬೆಳಕು ತಲುಪುತ್ತದೆ. ಆದ್ದರಿಂದ ಅಲ್ಲಿ ವಾಸಿಸುವ ಮೀನುಗಳು ಲಭ್ಯವಿರುವ ಅಲ್ಪ ಬೆಳಕನ್ನು ಹೆಚ್ಚು ಗ್ರಹಿಸಲು ದೊಡ್ಡ ಕಣ್ಣುಗಳನ್ನು ಹೊಂದಿರುತ್ತವೆ. ಹೀಗೆ ತಾವು ಬದುಕುವ ಪರಿಸರಕ್ಕೆ ಅನುಗುಣವಾಗಿ ಪ್ರಾಣಿಗಳು ತಮ್ಮ ದೇಹ ಮತ್ತು ಅಭ್ಯಾಸಗಳನ್ನು ರೂಢಿಸಿಕೊಂಡಿರುತ್ತದೆ. ವಿಚಿತ್ರವೆಂದರೆ ಮಾನವ ಮಾತ್ರ ಪರಿಸರಕ್ಕೆ ತಾನು ಹೊಂದಿಕೊಳ್ಳುವುದಕ್ಕಿಂತ, ತನಗೆ ಬೇಕಾದಂತೆ ಪರಿಸರವನ್ನು ಸೃಷ್ಟಿಸಲು ಮುಂದಾಗಿರುವುದೇ ಪ್ರಕೃತಿಯ ಅಸಮತೋಲನಕ್ಕೆ, ಮಾಲಿನ್ಯಕ್ಕೆ, ವಿಕೋಪಕ್ಕೆ ಮೂಲ ಕಾರಣ ಎನ್ನಬಹುದು.

ಸಸ್ಯ ಸಂಕುಲದ ಬಗೆಗೆ ಹೇಳುವುದಾದರೆ, ವಿಜ್ಞಾನಿಗಳು ಸುಮಾರು 3,20,000 ರಿಂದ 5,00,000 ವಿವಿಧ ಸಸ್ಯ ಜಾತಿಗಳನ್ನು ಗುರುತಿಸಿದ್ದಾರೆ. ಆದ–ರೆ, ಸಸ್ಯಗಳ ನಿಜವಾದ ಸಂಖ್ಯೆ ಇದಕ್ಕಿಂತಲೂ ಹೆಚ್ಚು ಇರಬಹುದು ಎಂದು ಅವರು ಅಂದಾಜಿಸಿದ್ದಾರೆ. ಇದರಲ್ಲಿ ಅನೇಕ ಮರಗಳು ಮತ್ತು ಹೂವಿನ ಸಸ್ಯಗಳು ಏಷ್ಯಾ ಖಂಡದಲ್ಲಿ ಕಂಡುಬರುತ್ತವೆ. ಇತರ ಅನೇಕ ಸಸ್ಯಗಳು ಉಷ್ಣವಲಯದ ಮಳೆಕಾಡುಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತವೆ. ಕೆಲವು ಸಸ್ಯಗಳು ನೀರಿನಲ್ಲಿ ಅಥವಾ ನೀರಿನ ಅಡಿಯಲ್ಲಿ ಬದುಕಲು ಹೊಂದಿಕೊಂಡಿದ್ದರೆ, ಇನ್ನೂ ಕೆಲವು ಮರುಭೂಮಿ ಪ್ರದೇಶಗಳಲ್ಲಿ ಬೆಳೆಯಲು ಹೊಂದಿಕೊಂಡಿವೆ.

ಪಾಚಿ, ಕಲ್ಲುಹೂವು ಮತ್ತು ಶೈವಲ ಕೂಡ ಸಸ್ಯ ಸಾಮ್ರಾಜ್ಯದ ಭಾಗಗಳಾಗಿವೆ. ಭೂಮಿಯ ಮೇಲೆ ಲಕ್ಷಾಂತರ ಸಸ್ಯ ಜಾತಿಗಳಿದ್ದು, ಅವು ವಿವಿಧ ಪರಿಸರಗಳಲ್ಲಿ ಬದುಕಲು ವಿಶೇಷವಾಗಿ ಹೊಂದಿಕೊಂಡಿವೆ. ಸಸ್ಯಗಳು ಜೀವಜಗತ್ತಿನ ಉಳಿವಿಗೆ ಅತ್ಯಂತ ಮುಖ್ಯವಾಗಿವೆ. ಪ್ರಾಣಿ ಸಂಕುಲದ ಬಗೆಗೆ ಹೇಳುವುದಾದರೆ ಭೂಮಿಯ ಮೇಲೆ 15 ಲಕ್ಷಕ್ಕೂ (1.5 ಮಿಲಿಯನ್) ಹೆಚ್ಚು ಪ್ರಾಣಿ ಜಾತಿಗಳು ಇವೆ. ಸರಳವಾದ ಸ್ಪಂಜ್‌ಗಳು ಮತ್ತು ಜೆಲ್ಲಿ ಫಿಶ್‌ಗಳಿಂದ ಹಿಡಿದು, ಸಂಕೀರ್ಣವಾದ ಪ್ರಾಣಿಗಳವರೆಗೆ ಅನೇಕ ವಿಧದ ಜೀವಿಗಳು ಪ್ರಾಣಿ ಸಾಮ್ರಾಜ್ಯದಲ್ಲಿ ಸೇ–ರಿವೆ. ಬೆನ್ನೆಲುಬಿಲ್ಲದ ಪ್ರಾಣಿಗಳಲ್ಲಿ 10 ಲಕ್ಷಕ್ಕೂ ಹೆಚ್ಚು ಕೀಟ ಜಾತಿಗಳು ಕಂಡುಬರುತ್ತವೆ. ಬೆನ್ನೆಲುಬುಳ್ಳ ಪ್ರಾಣಿಗಳಲ್ಲಿ ಸುಮಾರು 35,000 ಜಾತಿಯ ಮೀನುಗಳು ಇವೆ. ಸುಮಾರು 350 ಮಿಲಿಯನ್ ವರ್ಷಗಳ ಹಿಂದೆ, ನೀರಿನಲ್ಲಿ ವಾಸಿಸುತ್ತಿದ್ದ ಕೆಲವು ಪ್ರಾಣಿಗಳು ಭೂಮಿಯ ಮೇಲೆ ಬದುಕಲು ಹೊಂದಿಕೊಂಡವು.

ಹೀಗೆ ಉಭಯಚರಗಳು ಹುಟ್ಟಿಕೊಂಡವು. ನಂತರ ಅವು ಮತ್ತಷ್ಟು ಹೊಂದಾಣಿಕೆಗಳನ್ನು ಬೆಳೆಸಿಕೊಂಡು ಸರೀಸೃಪಗಳಾಗಿ ವಿಕಸನಗೊಂಡವು. ಸರೀಸೃಪಗಳಿಂದ ಪಕ್ಷಿಗಳು ಮತ್ತು ಸುಮಾರು 4,000 ತಿಳಿದಿರುವ ಸಸ್ತನಿಗಳ ಜಾತಿಗಳು ವಿಕಸನಗೊಂಡಿವೆ. ಪ್ರಾಣಿಗಳು ವಿಕಸನಗೊಂಡ ಕಾಲದಿಂದಲೂ ಅನೇಕ ಜಾತಿಗಳು ಅಳಿದುಹೋಗುತ್ತಿವೆ. ಹೆಚ್ಚಿನ ಸಂದರ್ಭಗಳಲ್ಲಿ, ಕೆಲವು ಜೀವಿಗಳು ಬದಲಾಗುತ್ತಿರುವ ಪರಿಸರ ಪರಿಸ್ಥಿತಿಗಳಿಗೆ ಬೇಗನೆ ಹೊಂದಿಕೊಳ್ಳಲು ಸಾಧ್ಯವಾಗುವುದಿಲ್ಲ. ಕೆಲವೊಮ್ಮೆ ಹೊಸ ಜಾತಿಗಳು ಹುಟ್ಟಿಕೊಂಡು ಹಳೆಯ ಜಾತಿಗಳನ್ನು ಸ್ಥಳಾಂತ–ರಿಸುತ್ತವೆ. ಶೋಚನೀಯ ವಿಚಾರವೆಂದರೆ ಇಂದು ಅನೇಕ ಪ್ರಾಣಿ ಜಾತಿಗಳು ಮಾನವರ ಚಟುವಟಿಕೆಗಳಿಂದ ಅಳಿವಿನಂಚಿಗೆ ತಲುಪುತ್ತಿವೆ. ಉದಾಹರಣೆಗೆ: ಆನೆಗಳುನ್ನು ಬೇಟೆಯಾಡಲಾಗುತ್ತಿದೆ.

ದೊಡ್ಡ ಬೆಕ್ಕುಗಳ ಜಾತಿಗಳಾದ ಹುಲಿ ಮತ್ತು ಸಿಂಹಗಳ ಸಂಖ್ಯೆಯೂ ಕಡಿಮೆಯಾಗುತ್ತಿದೆ. ರೈನೋಸಾರಸ್ ಗಳನ್ನು ನಿರ್ದಯವಾಗಿ ಬೇಟೆಯಾಡಲಾಗುತ್ತಿದೆ. ಕಾಡುಗಳನ್ನು ನಾಶಪಡಿಸಲಾಗುತ್ತಿದೆ. ಗ್ರೇ ವೇಲ್ಡ್ ಅಳಿವಿನ ಅಪಾಯದಲ್ಲಿದೆ. ಇಂತಹ ಅನೇಕ ಜೀವಿಗಳ ಹೆಸರುಗಳು 'ರೆಡ್ ಲಿಸ್ಟ್' ನಲ್ಲಿ ಸೇರಿವೆ, ಇದು ಅಳಿವಿನ ಅಪಾಯದಲ್ಲಿರುವ ಜಾತಿಗಳ ಪಟ್ಟಿಯಾಗಿದೆ. ಪರಿಸರ ಮಾಲಿನ್ಯ, ಅಕ್ರಮ ಬೇಟೆ ಮತ್ತು ಕಳ್ಳಸಾಗಣೆ ಜೀವಜಗತ್ತಿಗೆ ದೊಡ್ಡ ಅಪಾಯವನ್ನು ಉಂಟುಮಾಡುತ್ತಿವೆ. ಒಳ್ಳೆಯ ವಿಷಯವೆಂದರೆ, ವಿಜ್ಞಾನಿಗಳು ಇನ್ನೂ ಹೊಸ ಹೊಸ ಪ್ರಾಣಿ ಜಾತಿಗಳನ್ನು ಕಂಡುಹಿಡಿಯುತ್ತಿದ್ದಾರೆ.

## 'ಬದುಕ ಭಾವ'



ಮಮತೆ ಎಂದರೇನು..? ಎಳೆ ಕಂದನ
ಹಾಲು ತುಟಿ ಒರೆಸುವ ಅಮ್ಮನ ಕೈ ಸ್ಪರ್ಶ..

ಕಾಳಜಿ ಎಂದರೆ..? ಅಪ್ಪನಾಗಿ ಮಗನು ಮೊದ
ಮೊದಲು ಪೆನ್ಸಿಲ್ ಶಾರ್ಪ್ ಮಾಡಿಕೊಳ್ಳುವುದ
ಹೇಳಿಕೊಟ್ಟ ಪಾಠ..

ಪ್ರೀತಿ ಎಂದರೇನು..? ಸಿಗದ ಪ್ರೀತಿಯ
ನೆನೆದು ಜೀವಂತವಾಗಿರಿಸುವ ಪರಿ..

ದಾಂಪತ್ಯ ಎಂದರೆ..? ಮುನಿಸಿಕೊಂಡ
ಹೆಂಡತಿಯ ಮೊದಲು ಎಂದೂ ನೋಡಿರದ
ಹಾಗೆ ಕದ್ದು ಮುಚ್ಚಿ ನೋಡಿ ನಗುವ ನಗೆ...

ಬದ್ಧತೆ ಎಂದರೆ..? ಬೈದು ಹೋದ
ಗಂಡನಿಗೂ ಹೊಟ್ಟೆ ತುಂಬಾ ಊಟ
ಬಡಿಸುವ ತಾಯಿ ಹೃದಯದ ಮಡದಿಯ
ಕೈ ತುತ್ತು...

ಜವಾಬ್ದಾರಿ ಎಂದರೆ..? ಕೊನೆಗಾಲದ ಅಪ್ಪನಿಗೆ
ಮಗನೆ ಕಣ್ರೆಪ್ಪೆಯಾಗಿ ಕಾಯ್ವ ಪರಿ...

ಸೋದರತೆಯೊಂದು ಬದಲಾಗದ ಭಾವ..
ನಮ್ಮನು ಮಕ್ಕಳಂತೆ ಕಾಯ್ವ ಜೀವಗಳ
ಮನಸು...

ಸ್ನೇಹ ಎಂದರೆ..? ಅದೇನೊ ಹೇಳದೆಯೂ
ಎಲ್ಲಾ ಅರ್ಥೈಸಿಕೊಂಡು ದೂರವಿದ್ದರು
ಎದುರು ಬದುರು ಕೂತು ಮಾತಾಡಿದಂತ
ಸಮಾಧಾನ...

ನೀನೆಂದರೆ..? ನಾನೆಂದರೆ..?
ಹೀಗೆ ಬದುಕೆಂದರೆ ಒಂದು ನಂಬಿಕೆ...
ಹೀಗೇ ಒಬ್ಬರದು
ಒಂದೊಂದು ಭಾವಕ್ಕೂ
ಸಂಬಂಧಕ್ಕೂ



ಶೃತಿ ಸಿರಿ, ಸಹಶಿಕ್ಷಕಿ ಶಿವಮೊಗ್ಗ.

## ಹೆಜ್ಜೆ ಮೂಡದ ಹಾದಿ



ಹೆಜ್ಜೆ ಮೇಲೆ ಹೆಜ್ಜೆ ಇಡುತ
ಸಾಗುತ್ತಲೇ ಇದ್ದೇವೆ
ಬೆಡಗು ಬಿನ್ನಾಣ ಹೊತ್ತು
ಮೊಂಡು ವಾದದಿ
ವೈಪರೀತ್ಯ ಸುಳಿಯಲಿ

ಬೇಡ ಎಂದರು ಬಿಡದ ರೀತಿ
ಕೊಂಡು ಕೊಳ್ಳುವ ಹುನ್ನಾರ
ಪಡೆಯುವ ಹಂಬಲದಿ
ಇನ್ನಷ್ಟು ಮತ್ತಷ್ಟು ಮೊಗೆದಷ್ಟೂ
ಬಗೆ ಬಗೆಯ ಕಾರಣ

ಹೊಟ್ಟೆ ಹೊರೆಯಲು
ಬಟ್ಟೆ ತೊಟ್ಟು ಮೆರೆಯಲು
ಕಟ್ಟೆಯಲಿ ಕುಳಿತು ಮಾತಾಡಲು
ತಡಬಡಿಸುತ ಸಾವರಿಸುತ
ದಾಂಗುಡಿ ಇಡುತಾ

ಹೊರಡುವಾಗ ಹೆಜ್ಜೆ ಗುರುತಿಲ್ಲ
ಎಲ್ಲ ಅಯೋಮಯ
ಇದ್ದಾಗ ಬೆಲೆ
ಕಾಲದಿ ಸೆರೆ
ಹೆಜ್ಜೆ ಗುರುತು ಇಲ್ಲವೇ ಇಲ್ಲ



ರೇಷ್ಮಾ ಕಂದಕೂರ

## ಶೇಂಗಾ ಮತ್ತು ಎಳ್ಳಿನ ದಿಢೀರ್ ಉಂಡೆ..!









ಚಳಿಗಾಲದಲ್ಲಿ ಶೇಂಗಾ, ಎಳ್ಳು, ಬೆಲ್ಲದ ಬಳಕೆ ಜಾಸ್ತಿ. ಎಣ್ಣೆಯ ಅಂಶ ಜಾಸ್ತಿ ಇರುತ್ತೆ, ಹಾಗೆ ಆರೋಗ್ಯಕ್ಕೂ ಉತ್ತಮ.ಕಬ್ಬಿಣದ ಅಂಶ ಹಾಗೆ ಕ್ಯಾಲ್ಸಿಯಂ ಅಂಶ ಕೂಡಾ ಹೆಚ್ಚು.ಹಾಗಾಗಿ ಎಳ್ಳಿನ ಉಂಡೆ, ಶೇಂಗಾ ಉಂಡೆ, ಶೇಂಗಾ ಹೋಳಿಗೆ ಮಾಡಿ ತಿನ್ನುವ ರೂಢಿ. ಇವತ್ತು ಸಿಂಪಲ್ ಆಗಿ 10/15 ನಿಮಿಷ ದಲ್ಲಿ ಮಾಡುವಂತ ಶೇಂಗಾ ಎಳ್ಳಿನ ದಿಢೀರ್ ಉಂಡೆ, ಹಾಗೆ ಯಾವುದೇ ಪಾಕ ಇಲ್ಲದೇ ಹೀಗೆ ಮಾಡೋದು ಅಂತ ನೋಡೋಣ ಬನ್ನೀ..

ಮಾಡಲು ಬೇಕಾಗುವ ಸಾಮಗ್ರಿಗಳು

ಶೇಂಗಾ ಬೀಜ
ಬಿಳಿ/ ಕಪ್ಪು ಎಳ್ಳು
ಬೆಲ್ಲ
ಏಲಕ್ಕಿ, ಶುಂಠಿ ಪುಡಿ

ತವಾ ದಲ್ಲಿ ಒಂದು ದೊಡ್ಡ ಬಟ್ಟಲು ಶೇಂಗಾ ಬೀಜ ಹಾಕಿ ಸಣ್ಣ ಉರಿಯಲ್ಲಿ ನಿಧಾನಕ್ಕೆ ಹುರಿಯಬೇಕು. ಚೆನ್ನಾಗಿ ಹುರಿದ ನಂತರ ತೆಗೆದಿಟ್ಟು ಕಾಲು ಬಟ್ಟಲು ಎಳ್ಳು ಹಾಕಿ ಸಣ್ಣ ಉರಿಯಲ್ಲಿ ಹುರಿಯಬೇಕು. ಚಿಟ ಪಟ ಸಿಡಿಯುವವರೆಗೂ. ಸ್ವಲ್ಪ ಆರಿದ ನಂತರ ಮಿಕ್ಸಿ ಜಾರಿಗೆ ಹುರಿದಿಟ್ಟ ಶೇಂಗಾ, ಎಳ್ಳು,ಒಂದು ಬಟ್ಟಲು ಬೆಲ್ಲ (ಬೆಲ್ಲ ಸ್ವಲ್ಪ ಮೆತ್ತಗೆ ಇರುವುದನ್ನ ತೆಗೆದು ಕೊಂಡರೆ ಉತ್ತಮ), ಸ್ವಲ್ಪ ಏಲಕ್ಕಿ,

ಶುಂಠಿ ಪುಡಿ ಹಾಕಿ ರುಬ್ಬಬೇಕು. ತುಂಬಾ ನುಣ್ಣಗೂ ಅಲ್ಲದೇ, ತರಿ ತರಿಯಾಗಿ ರುಬ್ಬಬೇಕು. ಇಲ್ಲಿ ಬೆಲ್ಲವೇ ಉಂಡೆ ಕಟ್ಟಲು ಮುಖ್ಯ. ಹಾಗಾಗಿ ಜಿಗಿ ಹಾಗೂ ಮೆತ್ತನೆಯ ಬೆಲ್ಲ ಒಳ್ಳೆಯದು. ಮಿಕ್ಸಿ ಜಾರಿನಿಂದ ತೆಗೆದು, ಬಿಸಿ ಇರುವಾಗಲೇ ಕೈಗೆ ತುಪ್ಪ ಸವರಿ, ಚಿಕ್ಕ ಚಿಕ್ಕ ಉಂಡೆ ಮಾಡಬೇಕು. ಕಬ್ಬಿಣದ ಅಂಶ ಹೆಚ್ಚು ಈ ಉಂಡೆಯಲ್ಲಿ. ದೇಹದಲ್ಲಿ ಹೀಮೋಗ್ಲೋಬಿನ್ ಅಂಶ ಹೆಚ್ಚಾಗುತ್ತೆ. ತಿನ್ನಲು ಕೂಡಾ ಅಷ್ಟೇ ರುಚಿ. ಈ ಚಳಿಗಾಲದಲ್ಲಿ ಒಮ್ಮೆ ಮಾಡಿ ಮನೆ ಮಂದಿಯಲ್ಲ ಈ ಉಂಡೆಯನ್ನು ಸವಿಯಿರಿ.



ಮಮತ ತೋಟೇಶ್ ಪುಣೆ. ಮಹಾರಾಷ್ಟ್ರ.

## ಸೂರ್ಯನ ಚೂರುಗಳು



ನಮ್ಮ ಕಾಲದ ಸಾರಸ್ವತ ಲೋಕದ ತಾರೆಗಳ ನಿಜಮುಖವನ್ನು ಅನಾವರಣಗೊಳಿಸುವ ದರ್ಪಣದಂತಿದೆ. ಕನ್ನಡದಲ್ಲಿ ಪ್ರಕಟವಾಗಿರುವ ವ್ಯಕ್ತಿಚಿತ್ರಗಳಿಗಿಂತ ಭಿನ್ನವೂ ಅನನ್ಯವೂ ಸ್ವೋಪಜ್ಞವೂ ಆದ ಬರಹಗಳಿವು. ಎಪ್ಪತ್ತರ ದಶಕದಿಂದೀಚೆಗಿನ ಸಾಂಸ್ಕೃತಿಕ ಚಲನೆಗಳ ಹಿಂದಣ ಶಕ್ತಿ ಕೇಂದ್ರವಾಗಿದ್ದ ಜಿ.ಎಸ್. ಶಿವರುದ್ರಪ್ಪ, ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್, ಕಂಬಾರ, ಸಿದ್ಧಲಿಂಗಯ್ಯ, ಚೆನ್ನಣ್ಣ ವಾಲೀಕಾರ, ಮಲ್ಲೇಪುರಂ ಮುಂತಾದ ದೊಡ್ಡ ಲೇಖಕರ ವ್ಯಕ್ತಿತ್ವಗಳನ್ನು ಅನನ್ಯವಾಗಿ ಹಿಡಿದಿಡುವ, ತಮ್ಮ ವ್ಯಾಪಕವಾದ ಜೀವನಾನುಭವ ಮತ್ತು ಆಳವಾದ ಅಧ್ಯಯನಗಳ ಫಲಿತದಿಂದ ಪಕ್ಷಾತೀತವಾಗಿ ಚರ್ಚಿಸುವ, ವಿಶ್ಲೇಷಿಸುವ ಪ್ರಯತ್ನವನ್ನು ಈ ಬರಹದಲ್ಲಿ ಕಾಣಬಲ್ಲೆವು.

ತಮ್ಮ ಅನುಭವಗಳನ್ನು ದಾಖಲಿಸುವಾಗ ಕುಂ.ವೀ.ಯವರು ಕಾಪಾಡಿಕೊಂಡಿರುವ ಖಚಿತತೆ, ನಿರ್ದಾಕ್ಷಿಣ್ಯಪರತೆ, ನಿರ್ಭೀತಿ, ಧೈರ್ಯ ಮತ್ತು ಪ್ರಾಮಾಣಿಕತೆಗಳು ಈ ಬರಹಗಳ ಹಿಂದಿರುವ ದೊಡ್ಡಶಕ್ತಿ. ಸತ್ಯ ನಿಷ್ಠುರತೆಗಳು ಮೈದುಂಬಿಕೊಂಡಿರುವ ಇಲ್ಲಿನ ಚಿತ್ರಗಳಲ್ಲಿ ದೊಡ್ಡವರೆನ್ನಿಸಿಕೊಂಡವರ ಸಣ್ಣತನಗಳು, ಪ್ರತಿಭೆಯನ್ನು ಸಹಿಸದ ಹೊಟ್ಟೆಕಿಚ್ಚು, ಅವಜ್ಞತೆಯ ಜಾಣತನ, ಅಸಹಿಷ್ಣುತೆ, ಅವಕಾಶವಾದಿತನ ಮುಂತಾದ ಗುಣಗಳು ಮುನ್ನೆಲೆಗೆ ಬಂದು, ನಮ್ಮ ಸಾರಸ್ವತ ಲೋಕದ ಅನೇಕ ತಾರೆಗಳ ಬಣ್ಣ ಕಳಚುತ್ತವೆ. ಹೀಗೆ ಮಾಡುವಾಗ ಆಯಾ ಲೇಖಕರ ಬರಹದ ಶಕ್ತಿಯನ್ನು ಮೆಚ್ಚುವ ಉದಾರತೆಯನ್ನು ಲೇಖಕರು ಕಾಪಾಡಿಕೊಂಡಿರುವುದು ಗಮನಾರ್ಹ.

ಇಪ್ಪತ್ತನೆಯ ಶತಮಾನದ ಕೊನೆಯ ಮೂರು ದಶಕಗಳಿಂದ ಮೊದಲುಗೊಳ್ಳುವ ಈ ಬರಹಗಳು ಅಗೋಚರವಾಗಿರುವ ಹಲವು ಸಂಗತಿಗಳತ್ತ ಬೆಳಕು ಬೀರುತ್ತಲೇ ಲೇಖಕರ ವೈಯಕ್ತಿಕ ಬದುಕಿನ ಚಿತ್ರಗಳನ್ನೂ ಕಾಣಿಸುತ್ತ ಸಾಗುತ್ತದೆ. ಕುಂ.ವೀಯವರ ಬದುಕಿನಲ್ಲಿ ಅನ್ನದೇವರಂತೆ ಬಂದು ಕಾಪಾಡಿದ 'ದುರುಗ್ಯಾ ನಾಯಕ' ಎಂಬ ಅತಿ ಸಾಮಾನ್ಯ ಜೀವಿಯ ಚಿತ್ರಣವಂತೂ ಉಳಿದೆಲ್ಲ ಮಹಾತಾರೆಯರ ಚಿತ್ರಗಳನ್ನು ಮಸುಕಾಗಿಸುವಂತೆ ಬೆಳಗಿದೆ. ಅನೇಕ ಹಿರಿಯ ಲೇಖಕರ ಸೋಗಲಾಡಿತನವನ್ನು ಬಿಚ್ಚಿಡುವ ಕುಂವೀಯವರು ಎಲ್ಲಿಯೂ ತಮ್ಮ ವ್ಯಂಗ್ಯ, ವಿಡಂಬನೆ, ವಿನೋದ ಶೈಲಿಯನ್ನು ಬಿಟ್ಟುಕೊಟ್ಟಿಲ್ಲ. ಕುವೆಂಪು ಅವರ 'ದರುಶ'ನದ ಸನ್ನಿವೇಶ, ಶಿವರುದ್ರಪ್ಪನವರ ಕಾರ್ ಡ್ರೈವಿಂಗ್,

ಹೆಸರಿನಿಂದ ಸಿದ್ಧಲಿಂಗಯ್ಯನವರು ಲಿಂಗಾಯತರಿರಬಹುದೆಂದು ಭಾವಿಸಿದ ಪ್ರಸಂಗದ ಪೇಚಾಟಗಳನ್ನು ಓದಿದವರು ನಗದಿರಲು ಸಾಧ್ಯವಾಗದು. ಅಗ್ರಹಾರ ಕೃಷ್ಣಮೂರ್ತಿಯವರು ದೆಹಲಿ ಕೇಂದ್ರಿತವಾಗಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯವ್ಯಾಪ್ತಿಯನ್ನು ಬೆಂಗಳೂ–ರಿಗೆ ತಂದ, ಗೋಷ್ಠಿಗಳನ್ನು ಕೊಟ್ಟೂರಿನಂತಹ ಪುಟ್ಟ ಪಟ್ಟಣದವರೆಗೆ ವಿಸ್ತರಿಸಿದ ಬಗ್ಗೆ ತುಂಬು ಹೃದಯದಿಂದ ಮೆಚ್ಚಿ ಕುಂವೀ ಅಗ್ರಹಾರ ಅವರ ಕಾರ್ಯವೈಖರಿ, ಕರ್ತೃತ್ವಶಕ್ತಿಗಳನ್ನು ದಾಖಲಿಸಿದ್ದಾರೆ. ಆದರೆ ಅಗ್ರಹಾರ ಅವರು ತಮ್ಮ 'ನಾಡವರ್ಗಳ್' ಕೃತಿಯಲ್ಲಿ ಕುಂವೀ ಬಗ್ಗೆ ಬರೆಯಬಹುದಾದ ಅವಕಾಶವನ್ನು ಕೃಪಣಗುಣದಿಂದ ಕಳೆದುಕೊಂಡಿರುವುದು, ಜಯಂತ ಕಾಯ್ಕಿಣಿ ಕಥ–'ಗಳನ್ನು ಮೆಚ್ಚಿ ಕುಂವೀ ಕಥೆಗಳ ಬಗ್ಗೆ ಚಕಾರವೆತ್ತದ ಸಂದರ್ಭದ ಮುಂದುವರಿಕೆಯಾಗಿ ಕಾಣುತ್ತದೆ.

ಜಾತಿ ರಾಜಕಾರಣಗಳು ಸಾಹಿತ್ಯವನ್ನು ನಿರ್ದೇಶಿಸುತ್ತಿರುವ ಪರಿಗೆ ಇದೊಂದು ಉತ್ತಮ ಉದಾಹರಣೆಯಂತಿದೆ. ಈ ಹೊತ್ತು ನಮ್ಮ ಸಾರಸ್ವತ ಲೋಕವನ್ನು ಆಳುತ್ತಿರುವ 'ಪ್ರಶಸ್ತಿ'ಗಳನ್ನು ಪಡೆದುಕೊಳ್ಳುವ, ಹೊಡೆದುಕೊಳ್ಳುವ ಮತ್ತು ಕೊಡುವವರ 'ರಾಜಕಾರಣ' ನಡೆಯನ್ನು ಮುಲಾಜಿಲ್ಲದೆ ಬೆತ್ತಲೆಗೊಳಿಸುವಾಗ ಕುಂವೀಯವ–ರಿಗೆ ಮಾತ್ರ ಸಾಧ್ಯವಾಗಬಹುದಾದ ದಿಟ್ಟತನವನ್ನು ಈ ಕೃತಿಯಲ್ಲಿ ನಾವು ಮನಗಾಣಬಹುದು.

ವಚನ ಸಾಹಿತ್ಯದ ಸತ್ವದ ಬಗ್ಗೆ ಸೊಲ್ಲೆತ್ತದ ಅನಂತಮೂರ್ತಿಯವರು ಕರ್ನಾಟಕ ಸರ್ಕಾರ ಕೊಡಮಾಡುವ ಬಸವಶ್ರೀ ಪ್ರಶಸ್ತಿಯನ್ನು ಪಡೆದ ಅನೈತಿಕತೆಯಿಂದ ಮೊದಲ್ಗೊಂಡು ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿಗಳಂತಹ ಮಹತ್ತ್ವದ ಪ್ರಶಸ್ತಿಗಳು ತೀರ್ಮಾನವಾಗುವ ಹಿಂದಿನ ರಾಜ–ಕೀಯಗಳವರೆಗೆ ಈ ಕೃತಿಯ ಹರಹಿದೆ. ಪ್ರಶಸ್ತಿಗಳ ಹಪಾಹಪಿಯನ್ನು ತೊರೆದು, ತಮ್ಮ ಪಾಡಿಗೆ ತಾವು ಬೇಕಿನಿಸಿದ್ದನ್ನು ಬರೆದುಕೊಂಡಿರುವುದು ಹಿತಕರವೆಂಬ ಸಂದೇಶವನ್ನು ನಮ್ಮ ಹೊಸ ತಲೆಮಾರಿನ ಬರಹಗಾರ–ರಿಗೆ ಪರೋಕ್ಷವಾಗಿ ಈ ಕೃತಿ ದಾಟಿಸುತ್ತದೆ.

ಕುಂವೀಯವರ ಗದ್ಯದ ಮೋಹಕಶೈಲಿ, ಹರಿತವೂ ತೀಕ್ಷ್ಣವೂ ಆದ ವಿಡಂಬನೆಯ ಬರಹದ ಶೈಲಿ, ಸಾಹಿತ್ಯದ ಬಗ್ಗೆ, ಬದುಕಿನ ಬಗ್ಗೆ ಅವ–ರಿಗಿರುವ ಅಪಾರವಾದ ಕಾಳಜಿ, ಆಸಕ್ತಿಯ ಹರಹು ಇಲ್ಲಿನ ವ್ಯಕ್ತಿಚಿತ್ರಗಳಲ್ಲಿ ಮಿಂಚಿದೆ. ಜನಸಾಮಾನ್ಯರ ದೃಷ್ಟಿಕೋನದ ಮೂಲಕ ಬಿತ್ತರಗೊಂಡಿರುವ ಒಂದು ಕಾಲದ ಸಾಹಿತ್ಯ ಚರಿತ್ರೆಯಾಗಿಯೂ ಈ ಕೃತಿಯನ್ನು ನಾವು ಪರಿಭಾವಿಸಬೇಕು ಎಂಬುದಕ್ಕೆ ಕುಂವೀಯವರ ಚಿಂತನಾಕ್ರಮ ಮತ್ತು ಸಂವೇದನಾಶೀಲ ವಿಚಾರಧಾರೆಗಳು ಆದ–ರವಾಗಿವೆ. ಸಾಹಿತ್ಯವೆಂಬ ಸಂಸ್ಥೆಯನ್ನು ಅದರ ಎಲ್ಲ ಅವತಾರಗಳಲ್ಲಿ ಕಾಣಿಸುವ ಕಲಾಸೂಕ್ಷ್ಮತೆ ಮತ್ತು ಜವಾಬ್ದಾರಿಗಳು ಈ ಬರಹಗಳ ಹಿಂದಿರುವ ದೊಡ್ಡಶಕ್ತಿಯಾಗಿದೆ. ಕುಂವೀಯವರ ಕ್ಯಾಮರಾ ಕಣ್ಣು ಲೇಖಕರು, ಕಲಾವಿದರು, ಕಾರ್ಪಣ್ಯದ ಬದುಕಿನ ಬಡಜೀವಗಳನ್ನು ಸೆರೆಹಿಡಿದಿದೆ. ಇಂತಹ ಎಚ್ಚರಗಣ್ಣಿನ ಬರಹಗಳೇ ನಮ್ಮ ನಿಜದ ಸಾಂಸ್ಕೃತಿಕ ಚರಿತ್ರೆಯನ್ನು ಅರ್ಥ ಮಾಡಿಸುವಂಥವು.



ಡಾ.ಎಚ್.ಎಸ್. ಸತ್ಯನಾರಾಯಣ.



# ಬರಗಾಲ ಘೋಷಣೆ ಹೋರಾಟ: ಸರ್ಕಾರದ ವಿರುದ್ಧ ರೈತರ ಆಕ್ರೋಶ.

ಅ.ಶ. ಸುದ್ದಿ ವಿಜಯಪುರ

ವಿಜಯಪುರ: ಜಿಲ್ಲೆಯಲ್ಲಿ ಮಳೆ ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿರುವ ಸಂದರ್ಭದಲ್ಲಿ ಜಿಲ್ಲೆಯ ಎಲ್ಲಾ 13 ತಾಲೂಕುಗಳನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಿಸಿ, ರೈತ–ರಿಗೆ ಅಗತ್ಯ ಪರಿಹಾರ ಹಾಗೂ ಸರ್ಕಾರದ ಸೌಲಭ್ಯಗಳನ್ನು ಒದಗಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನಡೆಸುತ್ತಿರುವ ಹೋರಾಟ ಸೋಮವಾರ ಆರನೇ ದಿನ ಪೂರೈಸಿ ಏಳನೇಯ ದಿನಕ್ಕೆ ಕಾಲಿಟ್ಟಿತು.

ಮಳೆ ಸಂಪೂರ್ಣ ಕೈಕೊಟ್ಟಿದ್ದರೂ ಸರ್ಕಾರ ಕೇವಲ ಮೂರು ತಾಲೂಕುಗಳನ್ನು ಪೂರ್ಣ ಬರಗಾಲ ಹಾಗೂ ಇನ್ನೂ ಮೂರು ತಾಲೂಕುಗಳನ್ನು ಮಧ್ಯಮ ಬರಗಾಲ ಎಂದು



ಘೋಷಿಸಿ, ಉಳಿದ ಏಳು ತಾಲೂಕುಗಳನ್ನು ಬರಗಾಲದ ಪಟ್ಟಿಯಿಂದ ಕೈಬಿಟ್ಟಿರುವುದು ರೈತರಿಗೆ ಮಾಡಿರುವ ಅನ್ಯಾಯ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯ ಹಲವು ಭಾಗಗಳಲ್ಲಿ ಮಳೆ ಕೊರತೆಯಿಂದ ಬೆಳೆಗಳು ಒಣಗಿ ಹೋಗಿದ್ದು, ರೈತರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತಾಲೂಕುಗಳನ್ನು ಆಯ್ಕೆ ಮಾಡಿಕೊಂಡು ಬರಗಾಲ ಘೋಷಿಸಿರುವುದ–ರಿಂದ ಬರಪೀಡಿತ ರೈತರಿಗೆ ಸರ್ಕಾರದ ಪರಿಹಾರ ಹಾಗೂ ಇತರೆ ಸೌಲಭ್ಯಗಳು ದೊರೆಯದಂತಾಗಿದೆ ಎಂದು ಸಂಘದ ಮುಖಂಡರು ಆರೋಪಿಸಿದರು. ಕೂಡಲೇ ಜಿಲ್ಲೆಯಲ್ಲಿ ಬರ ಪರಿಸ್ಥಿತಿಯ ಸಮಗ್ರ ಸಮೀಕ್ಷೆ ನಡೆಸಿ, ಯಾವುದೇ ತಾಲೂಕನ್ನು ಹೊರತುಪಡಿಸದೆ ಜಿಲ್ಲೆಯ ಎಲ್ಲಾ 13 ತಾಲೂಕುಗಳನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಿಸಬೇಕು. ರೈತರ ಬೆಳೆ ನಷ್ಟಕ್ಕೆ ಸೂಕ್ತ ಪರಿಹಾರ ನೀಡುವುದರ ಜೊತೆಗೆ, ಜಾನುವಾರುಗಳಿಗೆ ಮೇವು ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಅವರು ಒತ್ತಾಯಿಸಿದರು. ಸರ್ಕಾರ ರೈತರ ಸಂಕಷ್ಟವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಬರ ಘೋಷಣೆ ಕು–ರಿತು ಸೂಕ್ತ ನಿರ್ಧಾರ ಕೈಗೊಳ್ಳಬೇಕು.

ಇಲ್ಲವಾದಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ರೈತ ಸಂಘದ ಮುಖಂಡರು ಎಚ್ಚರಿಕೆ ನೀಡಿದರು. ಹೋರಾಟದಲ್ಲಿ ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮನಗೌಡ ಪಾಟೀಲ, ಜಿಲ್ಲಾ ಉಪಾಧ್ಯಕ್ಷ ಮಹಾದೇವ ಬನಸೋಡೆ, ತಾಲೂಕು ಅಧ್ಯಕ್ಷ ಅನಮೇಶ ಜಮಖಂಡಿ, ಭೀಮು ಹೊನವಾಡ, ಅಮರೇಶ ಭೈರಗೊಂಡ, ಶಿವರಾಜ ಮೆಂಡೇಗಾರ, ಶೌಕತಲಿ ನದಾಪ, ಮುತ್ತು ಹಿರೇಗೋಳ, ಸಂತೋಷ ಬಿರಾದಾರ, ರಾಮನಗೌಡ ಪಾಟೀಲ ಗುಣಕಿ, ಗುರುಲಿಂಗಪ್ಪಗೌಡ ಬಿರಾದಾರ, ಸಿದ್ದಣ್ಣ ಬಾಳಿಗೇರಿ, ಅಶೋಕ ಜಂಬಗಿ, ಯಲ್ಲಾಲಿಂಗ ಮಣ್ಣಾಗೋಳ ಸೇರಿದಂತೆ ರೈತ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಜಾಲಹಳ್ಳಿ ಶ್ರೀಮರಡಿ ದುರ್ಗಾದೇವಿ ಹೊರಟ್ಟಿ ಹನುಮಪ್ಪ ಪಲ್ಲಕ್ಕಿ ಮೆರವಣಿಗೆ: ಕೃಷ್ಣಾ ನದಿಯಲ್ಲಿ ಗಂಗಾಪೂಜೆ

ಅ.ಶ. ಸುದ್ದಿ ಜಾಲಹಳ್ಳಿ

ಜಾಲಹಳ್ಳಿ: ಶ್ರಾವಣ ಮಾಸದ ಅಂಗವಾಗಿ ಜಾಲಹಳ್ಳಿ ಪಟ್ಟಣದ ಶ್ರೀ ಮರಡಿ ದುರ್ಗಾದೇವಿ ಹಾಗೂ ಶ್ರೀ ಹೊರಟ್ಟಿ ಆಂಜಿನಯ್ಯ (ಹನುಮಪ್ಪ) ದೇವಸ್ಥಾನಗಳ ವತಿಯಿಂದ ಪ್ರತಿವರ್ಷದಂತೆ ಈ ಬಾರಿಯೂ ಎರಡು ದಿನಗಳ ಧಾರ್ಮಿಕ ಕಾರ್ಯಕ್ರಮಗಳನ್ನು ಭಕ್ತಿಭಾವದಿಂದ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಅರ್ಚಕರಾದ ರಾಘವೇಂದ್ರ ಪೂಜಾರಿ ಹಾಗೂ ಹನುಮಯ್ಯ ಪೂಜಾರಿ ತಿಳಿಸಿದ್ದಾರೆ.



ಶ್ರಾವಣ ಮಾಸದ ನಾಲ್ಕನೇ ಶುಕ್ರವಾರದಂದು ಶ್ರೀ ಮರಡಿ ದುರ್ಗಾದೇವಿ ಹಾಗೂ ಶ್ರೀ ಹೊರಟ್ಟಿ ಆಂಜಿನಯ್ಯ ದೇವರ ಮೂರ್ತಿಗಳನ್ನು ವಿಶೇಷವಾಗಿ ಅಲಂಕರಿಸಿ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಗುವುದು. ಬಳಿಕ ಡೊಳ್ಳು ವಾದ್ಯಗಳ ಮಂಗಳಧ್ವನಿಯೊಂದಿಗೆ ನೂರಾರು ಭಕ್ತರ ಸಮ್ಮುಖದಲ್ಲಿ ಜಾಲಹಳ್ಳಿಯಿಂದ ಲಿಂಗದಹಳ್ಳಿ ಗ್ರಾಮದವರೆಗೆ ಭವ್ಯ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ. ಶುಕ್ರವಾರ ರಾತ್ರಿ ಪಲ್ಲಕ್ಕಿಗಳು ಲಿಂಗದಹಳ್ಳಿ ಗ್ರಾಮದಲ್ಲಿ ವಾಸ್ತವ್ಯ ಹೂಡಲಿದ್ದು, ಗ್ರಾಮಸ್ಥರು ಹಾಗೂ ಭಕ್ತರಿಗಾಗಿ ಅನ್ನಪ್ರಸಾದದ ವ್ಯವಸ್ಥೆ ಮಾಡಲಾಗುತ್ತದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದು ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕೃಷ್ಣಾ ನದಿಯಲ್ಲಿ ಗಂಗಾಪೂಜೆ ಶನಿವಾರ ಬೆಳಗ್ಗೆ ಸಂಪ್ರದಾಯದಂತೆ ಎರಡೂ ದೇವರ ಪಲ್ಲಕ್ಕಿಗಳು ಕೃಷ್ಣಾ ನದಿಗೆ ತೆರಳಲಿವೆ. ಅಲ್ಲಿ ದೇವರ ಮೂರ್ತಿಗಳಿಗೆ ಗಂಗಾಸ್ನಾನ ನೆರವೇರಿಸಿ, ಸಮೃದ್ಧ ಮಳೆ, ಉತ್ತಮ ಬೆಳೆ ಹಾಗೂ ನಾಡಿನ ಸುಭಿಕ್ಷೆಗಾಗಿ ವಿಶೇಷ ಪೂಜೆ ಹಾಗೂ ಗಂಗಾಪೂಜೆ ಸಲ್ಲಿಸಲಾಗುವುದು ಎಂದು ಹನುಮಯ್ಯ ಪೂಜಾರಿ ತಿಳಿಸಿದ್ದಾರೆ. ನಂತರ ಡೊಳ್ಳು ವಾದ್ಯಗಳೊಂದಿಗೆ ಕೃಷ್ಣಾ ನದಿಯಿಂದ ಜಾಲಹಳ್ಳಿಯ ಶ್ರೀ ದುರ್ಗಾದೇವಿ ಹಾಗೂ ಶ್ರೀ ಆಂಜಿನಯ್ಯ ದೇವಸ್ಥಾನದವರೆಗೆ ಭವ್ಯ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ. ಮೆರವಣಿಗೆಯಲ್ಲಿ ನೂರಾರು ಭಕ್ತರು ಪಾಲ್ಗೊಂಡು ದೇವರ ನಾಮಸ್ಮರಣೆ ಮಾಡುತ್ತಾ ಭಕ್ತಿಭಾವ ಮೆರೆದರು. ಸಂಜೆ ಪಲ್ಲಕ್ಕಿಗಳು ದೇವಸ್ಥಾನಕ್ಕೆ ಆಗಮಿಸಿದ ಬಳಿಕ ದೇವರಿಗೆ ವಿಶೇಷ ಪೂಜೆ ಹಾಗೂ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ ಎಂದು ಅರ್ಚಕರು ತಿಳಿಸಿದ್ದಾರೆ. ಭಕ್ತರಿಗೆ ಅನ್ನಪ್ರಸಾದ ಭಾನುವಾರ ಬೆಳಗ್ಗೆಯಿಂದಲೇ ಶ್ರೀ ಮರಡಿ ದುರ್ಗಾದೇವಿ ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಅನ್ನಪ್ರಸಾದ ವಿತರಣೆ ನಡೆಯಲಿದೆ. ಎರಡು ದಿನಗಳ ಧಾರ್ಮಿಕ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಲಿದ್ದಾರೆ.

# ಮಾಜಿ ಸಿಎಂ ಸಿದ್ದರಾಮಯ್ಯ ಆಪ್ತರ ಕಿತ್ತಾಟ, ಭುಗಿಲೆದ್ದ ಅಸಮಾಧಾನ

ಅ.ಶ. ಸುದ್ದಿ ಬೆಂಗಳೂರು

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಹಲವು ನಾಯಕರು ಇದೀಗ ಒಂದೊಂದಾಗಿ ಅಂತರ ಕಾಯ್ದುಕೊಳ್ಳುತ್ತಿರುವ ಬೆಳವಣಿಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಸಚಿವ ಸ್ಥಾನ ಸಿಕ್ಕವರು ಹಾಗೂ ಸಿಗದವರು ತಮ್ಮದೇ ಕಾರಣಗಳಿಗೆ ಅಸಮಾಧಾನ ವ್ಯಕ್ತಪಡಿಸುತ್ತಿರುವ ನಡುವೆಯೇ, ಮಾಜಿ ಸಚಿವ ಎಚ್.ಸಿ. ಮಹದೇವಪ್ಪ ಅವರ ಹೇಳಿಕೆಗಳು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿವೆ.ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ಮಹದೇವಪ್ಪ ಅವರು ಸಿದ್ದರಾಮಯ್ಯ ಅವರನ್ನು ಹೊಗಳುತ್ತಲೇ ತಮ್ಮ ಅಸಮಾಧಾನವನ್ನು ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಅಹಿಂದ ಸಮಾವೇಶಕ್ಕೆ ಒಂದು ಕಾಲದಲ್ಲಿ



ಸಿದ್ದರಾಮಯ್ಯ ಅವರ ಆಪ್ತರಾಗಿದ್ದ ಸತೀಶ್ ಜಾರಕಿಹೊಳಿ ಹಾಗೂ ಮಹದೇವಪ್ಪ ಅವರನ್ನು ಆಹ್ವಾನಿಸದಿರುವುದು ಚರ್ಚೆಗೆ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಹದೇವಪ್ಪ, ಅಹಿಂದ ನಾಯಕತ್ವ ಸ್ವಯಂ ಘೋಷಣೆಯಿಂದ ಬರುವುದಿಲ್ಲ ಎಂದು ಪರೋಕ್ಷವಾಗಿ ಟಾಂಗ್ ನೀಡಿದರು. ಹುಬ್ಬಳ್ಳಿಯಲ್ಲಿ ನಡೆದ ಅಹಿಂದ ಸಮಾವೇಶವನ್ನು ತಾನೊಬ್ಬನೇ ನಿಂತು ರೂಪಿಸಿದ್ದೆ.

ಅಹಿಂದ ನಾಯಕತ್ವ ಎಂದರೆ ಕೇವಲ ಭಾಷಣ ಮಾಡಿ ಹೋಗುವುದಲ್ಲ. ಸಾಮಾಜಿಕ ನ್ಯಾಯ ಹಾಗೂ ಹಿಂದುಳಿದ ವರ್ಗಗಳ ಪರ ಬದ್ಧತೆಯಿಂದ ಕೆಲಸ ಮಾಡಬೇಕು. ಸಂಘಟನೆ ನಡೆಸಲು ಪ್ರಜಾಪ್ರಭುತ್ವದ ರೀತಿಯಲ್ಲಿ ನಿರ್ಣಯಗಳು ನಡೆಯಬೇಕು ಎಂದು ಹೇಳಿದರು. "ಅಹಿಂದ ನಾಯಕ ಯಾರು ಎಂಬುದು ಭಾಷಣದಿಂದ ನಿರ್ಧಾರವಾಗುವುದಿಲ್ಲ. ಸಭೆ ಸೇರಿ ನಿರ್ಣಯ ಮಾಡಿದ ಮಾತ್ರಕ್ಕೆ ನಾಯಕತ್ವ ಸಿಗುವುದಿಲ್ಲ. ಇದು ಪ್ರಜಾಪ್ರಭುತ್ವ; ಹಾಗೆಲ್ಲ ನಡೆಯುವುದಿಲ್ಲ" ಎಂದು ಮಹದೇವಪ್ಪ ಹೇಳಿದರು. ಕಾಂಗ್ರೆಸ್‌ನಲ್ಲಿ ಒಗ್ಗಟ್ಟಿದೆ. ನಾವೆಲ್ಲರೂ ಸರಿಯಾದ ಹಾದಿಯಲ್ಲಿದ್ದೇವೆ ಎಂದು ಹೇಳಿದ ಅವರು, ಅಹಿಂದ ಚಳವಳಿ ಒಬ್ಬರಿಂದ ಮಾತ್ರ ನಿರ್ಮಾಣವಾಗಿಲ್ಲ.

ಹುಬ್ಬಳ್ಳಿಯಲ್ಲಿ ನಡೆದ ಮೊದಲ ಅಹಿಂದ ಸಮಾವೇಶದ ಸಂದರ್ಭದಲ್ಲಿ ತಾನೊಬ್ಬನೇ ಕುಳಿತು ಅದರ ರೂಪುರೇಷೆ ಸಿದ್ಧಪಡಿಸಿದ್ದೆ ಎಂದು ತಿಳಿಸಿದರು. ಇತ್ತೀಚೆಗೆ ನಡೆದ ಅಹಿಂದ ಸಮಾವೇಶವನ್ನು ಕೇವಲ ಒಬಿಸಿ ಸಮಾವೇಶ ಎಂದು ಕರೆಯಬಾರದು. ಕೆಲವು ವರ್ಗಗಳನ್ನು ಹೊರಗಿಟ್ಟು ಸಮಾವೇಶ ನಡೆಸಲಾಗಿದೆ ಎಂಬ ಅಭಿಪ್ರಾಯ ಸರಿಯಲ್ಲ. ಅದು ಹಿಂದುಳಿದ ವರ್ಗಗಳ ಸಮಾವೇಶವಾಗಬೇಕು. ಕಾಂಗ್ರೆಸ್‌ನಿಂದ 'ಜೈ ಬಾಪು, ಜೈ ಭೀಮ್' ಕಾರ್ಯಕ್ರಮಗಳನ್ನೂ ನಡೆಸಿದ್ದೇವೆ ಎಂದು ಹೇಳಿದರು. ಸಿದ್ದರಾಮಯ್ಯ ಅವರನ್ನು ಭೇಟಿಯಾಗಿಲ್ಲ. ಅವರು ಇನ್ನು ಸಕ್ರಿಯ ರಾಜಕಾರಣದಲ್ಲಿ ಇರುವುದಿಲ್ಲ ಎಂದು ಏಕೆ ಹೇಳಿದ್ದಾರೆ ಎಂಬುದು ನನಗೆ ಗೊತ್ತಿಲ್ಲ ಎಂದರು.

# ಅಂಬೇಡ್ಕರ್‌ರ ವೈಚಾರಿಕತೆ ಮುನ್ನಡೆಸುವ ಹೊಣೆ; ಜಿಲ್ಲೆಗೆ ನೂತನ ಪದಾಧಿಕಾರಿಗಳ ನೇಮಕ




ಅ.ಶ. ಸುದ್ದಿ ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ: ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ವೈಚಾರಿಕತೆಯ ಆಶಯಗಳನ್ನು ಜಿಲ್ಲೆಯಲ್ಲಿ ಬಲಪಡಿಸುವ ಉದ್ದೇಶದಿಂದ ಸಮತಾ ಸೈನಿಕ ದಳದ ಜಿಲ್ಲಾ ಸಂಘಟನೆಯನ್ನು ಪುನರಚಿಸಿ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಆರ್‌ಪಿಐ ರಾಜ್ಯಾಧ್ಯಕ್ಷ ಸತೀಶ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ನೂತನ ಪದಾಧಿಕಾ–ರಿಗಳ ಪದಗ್ರಹಣ ಕಾರ್ಯಕ್ರಮದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1924ರಲ್ಲಿ ಅಂಬೇಡ್ಕರ್ ಅವರು ಸ್ಥಾಪಿಸಿದ ಸಮತಾ ಸೈನಿಕ ದಳವು ಮಹಾಡ್ ಕೆರೆ ಪ್ರವೇಶ, ಕಾಳಾರಾಮ ದೇವಾಲಯ ಪ್ರವೇಶ ಸೇರಿದಂತೆ ಹಲವು ಸಾಮಾಜಿಕ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸಂಘಟನೆಯ ಹೋರಾಟದ ಪರಂಪರೆಯನ್ನು ಮುಂದುವರಿಸುವ ಜವಾಬ್ದಾರಿ ನೂತನ ಪದಾಧಿಕಾರಿಗಳ ಮೇಲಿದೆ ಎಂದರು. ಸಂಘಟನೆಯ ಹೆಸರನ್ನು ದುರುಪಯೋಗಪಡಿಸಿಕೊಂಡು ವಂಚನೆ ಅಥವಾ ಸಂಘಟನೆ ವಿರೋಧಿ ಚಟುವಟಿ–ಕೆಗಳಲ್ಲಿ ತೊಡಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಂತ್ರಸ್ತರು ಪೊಲೀಸರಿಗೆ ದೂರು ನೀಡಿದರೆ ಅವರ ಪರ ಸಂಘಟನೆ ನಿಲ್ಲಲಿದೆ ಎಂದು ಸ್ಪಷ್ಟಪಡಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ವೆಂಕಟ್ ಮಾತನಾಡಿ, ಪಾರದರ್ಶಕತೆ ಹಾಗೂ ಅಂಬೇಡ್ಕರ್ ಅವರ ವಿಚಾರಧಾರೆ ಆಧರಿಸಿ ಸಂಘಟನೆಯನ್ನು ಜಿಲ್ಲೆಯಲ್ಲಿ ಮತ್ತಷ್ಟು ಬಲಪಡಿಸಲಾಗುವುದು ಎಂದರು. 6ಜಿಲ್ಲಾಧ್ಯಕ್ಷ ಪಿಳ್ಳಾಂಜಿನಪ್ಪ ಮಾತನಾಡಿ, ಶೋಷಿತ ಸಮುದಾಯಗಳ ಧ್ವನಿಯಾಗಿ ಸಮತಾ ಸೈನಿಕ ದಳ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು. ನೂತನ ಪದಾಧಿಕಾರಿಗಳು: ರಾಜ್ಯ ಸಂಘಟನಾ ಕಾರ್ಯದರ್ಶಿ ವೆಂಕಟ್, ಜಿಲ್ಲಾಧ್ಯಕ್ಷ ಪಿಳ್ಳಾಂಜಿನಪ್ಪ, ಉಪಾಧ್ಯಕ್ಷ ಮಂಡಿಕಲ್ ಮುರಳಿ, ಪ್ರಧಾನ ಕಾರ್ಯದರ್ಶಿ ವೇಣು, ಮಹಿಳಾ ಅಧ್ಯಕ್ಷೆ ರೂಪಾ, ಯುವ ಘಟಕದ ಅಧ್ಯಕ್ಷ ಅಪ್ಪು ರಾಮ್ ಚರಣ್,ಚಿಕ್ಕಬಳ್ಳಾಪುರ ತಾಲ್ಲೂಕು ಅಧ್ಯಕ್ಷ: ಕೆ.ವಿ. ಶ್ರೀನಿವಾಸ, ಕಾಮಶೆಟ್ಟಹಳ್ಳಿಚಿಕ್ಕಬಳ್ಳಾಪುರ ತಾಲ್ಲೂಕು ಮಹಿಳಾ ಅಧ್ಯಕ್ಷೆ: ಮಮತಾ,ಬಾಗೇಪಲ್ಲಿ ತಾಲ್ಲೂಕು ಅಧ್ಯಕ್ಷ: ಅಂಜಿ,ಚಿಂತಾಮಣಿ ತಾಲ್ಲೂಕು ಅಧ್ಯಕ್ಷ: ರಾಮಕೃಷ್ಣಶಿಡ್ಲಘಟ್ಟ ತಾಲ್ಲೂಕು ಅಧ್ಯಕ್ಷ: ವಿಜಿಕುಮಾರ್ ಸೇರಿದಂತೆ ತಾಲ್ಲೂಕು ಘಟಕಗಳ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

# ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಸಚಿವ ಬಸವರಾಜ ರಾಯರಡ್ಡಿಯವರ 70ನೇ ಹುಟ್ಟುಹಬ್ಬ ಆಚರಣೆ

ಅ.ಶ. ಸುದ್ದಿ ಕುಕನೂರು

ಕುಕನೂರು: ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರಡ್ಡಿಯವರ 70ನೇ ಹುಟ್ಟುಹಬ್ಬದ ಅಂಗವಾಗಿ ರವಿವಾರದಂದು ಕುಕನೂರು ಹಾಗೂ ಯಲಬುರ್ಗಾ ಪಟ್ಟಣಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸಚಿವರ ಅಭಿಮಾನಿಗಳು ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದರು. ಕುಕನೂರು ಪಟ್ಟಣದ ಶ್ರೀ ಮಹಾಮಾಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಹುಟ್ಟುಹಬ್ಬದ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ಸಚಿವ ಬಸವರಾಜ ರಾಯರಡ್ಡಿಯವರು ಉತ್ತಮ ಆರೋಗ್ಯದಿಂದ ಇನ್ನಷ್ಟು ವರ್ಷಗಳ ಕಾಲ ಜನಸೇವೆ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲಿ ಎಂದು ಕಾರ್ಯಕರ್ತರು ಪ್ರಾರ್ಥಿಸಿದರು.

ಬಳಿಕ ಪಟ್ಟಣದ ಶ್ರೀ ವೀರಭದ್ರಪ್ಪ ವೃತ್ತಕ್ಕೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ನಂತರ ಕುಕನೂರು ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಬ್ರೆಡ್, ಹಣ್ಣು ಹಾಗೂ ಬಿಸ್ಕತ್‌ಗಳನ್ನು ವಿತ–ರಿಸುವ ಮೂಲಕ ಸಚಿವರ ಹುಟ್ಟುಹಬ್ಬವನ್ನು ಸಮಾಜಮುಖಿ ಕಾರ್ಯದೊಂದಿಗೆ ಆಚರಿಸಲಾಯಿತು. ನಂತರ ಪಟ್ಟಣದ ವೃದ್ಧಾಶ್ರಮದಲ್ಲಿ ವೃದ್ಧರ ಸಮ್ಮುಖದಲ್ಲಿ



ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು. ವೃದ್ಧಾಶ್ರಮದ ನಿವಾಸಿಗಳಿಗೆ ವಿಶೇಷ ಭೋಜನದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಹಿರಿಯರೊಂದಿಗೆ ಸಂತಸದ ಕ್ಷಣಗಳನ್ನು ಹಂಚಿಕೊಂಡ ಕಾರ್ಯಕರ್ತರು, ಹುಟ್ಟುಹಬ್ಬದ ಆಚರಣೆಯನ್ನು ಕೇವಲ ಸಂಭ್ರಮಕ್ಕೆ ಸೀಮಿತಗೊಳಿಸದೆ ಸಾಮಾಜಿಕ ಸೇವೆಯ ಮೂಲಕ ವಿಶೇಷವಾಗಿಸಿದರು. ಯಲಬುರ್ಗಾದಲ್ಲಿಯೂ ವಿಶೇಷ ಆಚರಣೆ ಅದೇ ರೀತಿ ಯಲಬುರ್ಗಾ ಪಟ್ಟಣದಲ್ಲಿಯೂ ಸಚಿವ ಬಸವರಾಜ ರಾಯರಡ್ಡಿಯವರ 70ನೇ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಬ್ರೆಡ್, ಬಿಸ್ಕತ್ ಹಾಗೂ ಹಣ್ಣುಗಳನ್ನು ವಿತರಿಸಿ ಸಾರ್ವಜನಿಕರೊಂದಿಗೆ ಹುಟ್ಟುಹಬ್ಬದ ಸಂತಸವನ್ನು ಹಂಚಿಕೊಳ್ಳಲಾಯಿತು.

ನಂತರ ಯಲಬುರ್ಗಾ ಪಟ್ಟಣದ ಕಾಂಗ್ರೆಸ್ ಕಾರ್ಯಾಲಯದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಯುವಕರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿ ಮಾನವೀಯತೆ ಮೆರೆದರು. ಜನಪರ ಸೇವೆ ಮುಂದುವ–ರಿಯಲಿ: ಸತ್ಯನಾರಾಯಣ ಹರಪನಹಳ್ಳಿ ಈ ಸಂದರ್ಭದಲ್ಲಿ ಮುಖಂಡ ಸತ್ಯನಾರಾಯಣ ಹರಪನಹಳ್ಳಿ ಮಾತನಾಡಿ, ಸಚಿವ ಬಸವರಾಜ ರಾಯರಡ್ಡಿಯವರು ಜನಪರ ಚಿಂತನೆ ಹಾಗೂ ಅಭಿವೃದ್ಧಿ ಕಾರ್ಯಗಳ ಮೂಲಕ ರಾಜ್ಯದ ಜನರ ವಿಶ್ವಾಸವನ್ನು ಗಳಿಸಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಅವರ ಸೇವೆ ಇನ್ನಷ್ಟು ವರ್ಷಗಳ ಕಾಲ ಮುಂದುವರಿಯಲಿ ಎಂದು ಶುಭ ಹಾರೈಸಿದರು. ರೈತರು ಹಾಗೂ ಬಡವರ ಪರವಾಗಿ ಕಾರ್ಯ: ದೇವಪ್ಪ ಸೋಬನದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕುಕನೂರು ತಾಲೂಕು ಅಧ್ಯಕ್ಷ ದೇವಪ್ಪ ಸೋಬನದ ಮಾತನಾಡಿ, ಸಚಿವ ಬಸವರಾಜ ರಾಯರಡ್ಡಿಯವರು ರೈತರು, ಬಡವರು ಹಾಗೂ ಸಾಮಾನ್ಯ ಜನರ ಪರವಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅವರ 70ನೇ ಹುಟ್ಟುಹಬ್ಬವನ್ನು ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಆಚ–ರಿಸಿರುವುದು ಸಂತಸದ ಸಂಗತಿಯಾಗಿದೆ ಎಂದು ಹೇಳಿದರು. ಶೈಕ್ಷಣಿಕ ಕ್ರಾಂತಿಯ ಹರಿಕಾರ: ವಿಷ್ಣು ಚಿಲಗೋಡ ಕಾಂಗ್ರೆಸ್ ಮುಖಂಡ ವಿಷ್ಣು ಚಿಲಗೋಡ ಮಾತನಾಡಿ, ಸಚಿವ ಬಸವರಾಜ ರಾಯರಡ್ಡಿಯವರು ದೂರದೃಷ್ಟಿಯುಳ್ಳ ನಾಯಕರಾಗಿದ್ದಾರೆ. ಯಲಬುರ್ಗಾ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಶಾಲೆ ಮತ್ತು ಕಾಲೇಜುಗಳನ್ನು ಆರಂಭಿಸುವ ಮೂಲಕ ಶೈಕ್ಷಣಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು. ಯಲಬುರ್ಗಾ ಹಾಗೂ ಕುಕನೂರು ತಾಲೂಕುಗಳ ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಉತ್ತಮ ಗುಣಮಟ್ಟದ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸುವ ಮೂಲಕ ಸಚಿವರು ಮೂಲಸೌಕರ್ಯ ಕ್ಷೇತ್ರಕ್ಕೂ ಆದ–ೄತೆ ನೀಡಿದ್ದಾರೆ. ತಾಲೂಕುಗಳ ಅಭಿವೃದ್ಧಿಯನ್ನೇ ಮೂಲಮಂತ್ರವಾಗಿಸಿಕೊಂಡು ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವ ಅವರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಯಲಬುರ್ಗಾ ಹಾಗೂ ಕುಕನೂರು ತಾಲೂಕುಗಳ ವೈದ್ಯಾಧಿಕಾರಿಗಳು ಸಿಬ್ಬಂದಿಗಳು ಮತ್ತು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ವಿವಿಧ ಘಟಕಗಳ ಪದಾಧಿಕಾ–ರಿಗಳು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಸಚಿವ ಬಸವರಾಜ ರಾಯರಡ್ಡಿಯವರ ಅಪಾರ ಸಂಖ್ಯೆಯ ಅಭಿಮಾನಿಗಳು ಭಾಗವಹಿಸಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka